# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026



Grow with Us, Advertise in Hampi Times
Print & Digital Media
"Looking to bring your sales and services to readers Fingertips? HAMPI TIMES is the ideal platform"



Call:9448633038/email:hampitimes@gmail.com




ಸಂಪುಟ:02 • ಸಂಚಿಕೆ: 305 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 14.06.2025 • ಶನಿವಾರ • ಪುಟ:04 • ಬೆಲೆ:2

Volume:02 • Issue: 305 • PRGI No:KARKAN/2023/88055 • VIJAYANAGARA • 14.06.2025 • Saturday • Page:04 • Rs:2


## ಆನಂದ ಬಾಣ

ಎಲ್ಲಾ ಕಛೇರಿಗಳಲ್ಲಿ ಮುಖ ಚಹರೆ ಕಡ್ಡಾಯ




## ಮೈಕ್ರೋ ನ್ಯೂಸ್

### ಕನಿಷ್ಠ ಬೆಂಬಲ ಬೆಲೆದಡಿ ಜೋಳ ಮಾರಾಟಕ್ಕೆ ಜೂ.30 ಕೊನೆಯ ದಿನ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಮುಂಗಾರು ಮತ್ತು ಹಿಂಗಾರು ಋತುವಿನಲ್ಲಿ ಬೆಳೆದ ಜೋಳವನ್ನು ಖರೀದಿ ಮಾಡಲು ಖರೀದಿ ಕೇಂದ್ರಗಳನ್ನು ಪ್ರಾರಂಭ ಮಾಡಲಾಗಿದ್ದು, ಖರೀದಿ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಈಗಾಗಲೇ ನೋಂದಣಿ ಮಾಡಿದ ರೈತರು ನೋಂದಾಯಿತ ಖರೀದಿ ಕೇಂದ್ರಗಳಿಗೆ ಭೇಟಿ ನೀಡಿ ಜೂ.30 ರೊಳಗಾಗಿ ಜೋಳ ಮಾರಾಟ ಮಾಡಬೇಕು.

ಜೋಳದ ಖರೀದಿ ಅವಧಿಯು ಜೂ.30 ಕ್ಕೆ ಕೊನೆ ದಿನವಾಗಿದ್ದು, ಮುಂಗಾರು ಮತ್ತು ಹಿಂಗಾರು ಋತುವಿನಲ್ಲಿ ಜೋಳ ಮಾರಾಟ ಮಾಡಲು ನೋಂದಣಿ ಮಾಡಿದ ರೈತರು ಸಂಬಂಧಪಟ್ಟ ಖರೀದಿ ಕೇಂದ್ರಗಳಲ್ಲಿ ಮಾರಾಟ ಮಾಡಿ ಗ್ರೇನ್ ವೋಚರ್ ಪಡೆದುಕೊಳ್ಳಬೇಕು.

ಖರೀದಿಯಾದ ಜೋಳವನ್ನು ಜೋಳ ಉಪಯೋಗಿಸುವ ಜಿಲ್ಲೆಗಳಿಗೆ ಪಡಿತರ ವಿತರಣೆಗೆ ಹಂಚಿಕೆ ನೀಡಲಾಗುವುದು. >>4

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷ ಎಂ.ಎಸ್.ದಿವಾಕರ ಹೇಳಿಕೆ

# ರೈತರು ಗಾಳಿಮಾತಿಗೆ ಕಿವಿಗೊಡಬೇಡಿ

## ರೈತ ಸಂಪರ್ಕ ಕೇಂದ್ರಗಳಲ್ಲಿ ರಸಗೊಬ್ಬರ, ಬಿತ್ತನೆ ಬೀಜಗಳು ಲಭ್ಯ ಇವೆ


**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಉತ್ತಮ ಮಳೆಯಾಗುತ್ತಿದ್ದು ಜೂ.1 ರಿಂದ ಇಲ್ಲಿಯ ವರೆಗೆ ಶೇ.55ಕ್ಕೂ ಅಧಿಕ ಮಳೆಯಾಗಿದ್ದು, ಶೇ.41 ರಷ್ಟು ಬಿತ್ತನೆಯಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷ ಎಂ.ಎಸ್.ದಿವಾಕರ ತಿಳಿಸಿದ್ದಾರೆ.



ಜಿಲ್ಲೆಯಲ್ಲಿ ನಿರೀಕ್ಷಿತ 37.7 ಮಿ.ಮಿ, ಬದಲಾಗಿ 56.9 ಮಿ.ಮಿ. ಮಳೆ ಆಗಿರುತ್ತದೆ. ಎಲ್ಲಾ 18 ಹೋಬಳಿಗಳಲ್ಲಿ ಉತ್ತಮ ಮಳೆಯಾಗಿದ್ದು, ಹಗರಿಬೊಮ್ಮನಹಳ್ಳಿ, ಹಂಪಸಾಗರ, ಹೊಸಪೇಟೆ ಕಸಬಾ, ಕೂಡ್ಲಿಗಿ ಕಸಬಾ ಹೋಬಳಿಗಳಲ್ಲಿ ಅತಿ ಹೆಚ್ಚು ಮಳೆ ದಾಖಲಾಗಿರುತ್ತದೆ. ಕಳೆದ 07 ದಿನಗಳಲ್ಲಿ 20.1 ಮಿ.ಮಿ. ವಾಡಿಕೆ ಮಳೆಗೆ ಎದುರಾಗಿ 51.2 ಮಿ ಮಿ ಮಳೆಯಾಗಿರುತ್ತದೆ.. ಸುಮಾರು ಶೇಕಡ 155 ರಷ್ಟು ಹೆಚ್ಚು ಮಳೆಯಾಗಿರುತ್ತದೆ.

ಈ ಉತ್ತಮ ಮಳೆಯ ಪರಿಣಾಮ ಜಿಲ್ಲೆಯಲ್ಲಿ ಬಿತ್ತನೆ ಪ್ರಮಾಣ 41 ರಷ್ಟು ಆಗಿರುತ್ತದೆ ಮುಖ್ಯವಾಗಿ ಮುಸುಕಿನ ಜೋಳ ಒಂದುಲಕ್ಷ ಹೆಕ್ಟೆರ್ ನಷ್ಟು ಬಿತ್ತನೆಯಾಗಿರುತ್ತದೆ. ಉಳಿದಂತೆ ಜೋಳ, ಸಜ್ಜೆ ಸೂರ್ಯಕಾಂತಿ ದ್ವಿದಳ ಧಾನ್ಯಗಳ ಬಿತ್ತನೆ ನಡೆಯುತ್ತಿರುತ್ತದೆ. ರೈತರಿಗೆ ರೈತ ಸಂಪರ್ಕ ಕೇಂದ್ರಗಳಲ್ಲಿ ಬಿತ್ತನೆ ಬೀಜಗಳು ಸಹಾಯ ಧನದಲ್ಲಿ ಲಭ್ಯವಿರುತ್ತದೆ. ಮತ್ತು ರಸಗೊಬ್ಬರಗಳ ಲಭ್ಯತೆ ಸಾಕಷ್ಟು ಇದ್ದು ರೈತರು ಯಾವುದೇ ಊಹಾ–ಪೋಹಗಳಿಗೆ ಕಿವಿಗೊಡಬಾರದಾಗಿ ಜಿಲ್ಲಾಡಳಿತ ತಿಳಿಸಿದೆ.



ಇತ್ತೀಚಿನ ಮಳೆಯಿಂದಾಗಿ 35 ಹೆಕ್ಟೆರ್ ಕೃಷಿ ಬೆಳೆ ಹಾನಿಯಾಗಿದ್ದು, ಕೃಷಿ ಇಲಾಖೆ, ಕಂದಾಯ ಇಲಾಖೆ ಅಧಿಕಾರಿಗಳು ಜಂಟಿ ಸಮೀಕ್ಷೆಕಾರ್ಯ ನಡೆಸುತ್ತಿದ್ದಾರೆ. 13 ಮನೆಗಳಿಗೆ ಭಾಗಶ ಹಾನಿಯಾಗಿದ್ದು, ಎಲ್ಲರಿಗೂ ನಿಯಮಾನುಸಾರ ಪರಿಹಾರ ವಿತರಿಸಲಾಗಿರುತ್ತದೆ. ಸಿಡಿಲು ಬಡಿದು ಜೀವಹಾನಿಯಾದ ಒಂದು ಕುಟುಂಬಕ್ಕೆ ಹಾಗೂ ಗಾಯಗೊಂಡ ಒಂದು ಕುಟುಂಬಕ್ಕೆ ಪರಿಹಾರ ವಿತರಣೆ ಮಾಡಲಾಗಿರುತ್ತದೆ.

ಪೂರ್ವ ಮುಂಗಾರು ಹಂಗಾಮೊನಲ್ಲಿ ಹಾನಿಗೊಳಗಾದ 121.90 ಹೆಕ್ಟೆರ್ ಬೆಳೆಗೆ ಸರ್ವೇ ಮಾಡಿ ಫಲಾನುಭವಿಗಳ ವಿವರಗಳನ್ನು ಸರ್ಕಾರಕ್ಕೆ ವರದಿ ಮಾಡಲಾಗಿದ್ದು, ಸದ್ಯದಲ್ಲಿ ಪರಿಹಾರ ಪಾವತಿ ಮಾಡಲಾಗುವುದು

ಉತ್ತಮ ಮಳೆಯಿಂದಾಗಿ ಬಿತ್ತನೆ ವಿಸ್ತೀರ್ಣವು ಜಾಸ್ತಿಯಾಗುವ ನಿರೀಕ್ಷೆ ಇದ್ದು ಬೀಜ ಮತ್ತು ರಸಗೊಬ್ಬರಕ್ಕೆ ಸೂಕ್ತ ವ್ಯವಸ್ಥೆ ಮಾಡಿಕೊಳ್ಳಲು ಕೃಷಿ ಮತ್ತು ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ.

ಸಾರ್ವಜನಿಕರು ನೆರೆ, ಪ್ರವಾಹ ಸಂದರ್ಭದಲ್ಲಿ ತಹಶೀಲ್ದಾರರ ಕಛೇರಿಯ ಸಹಾಯವಾಣಿ ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದು.

### ಸಹಾಯವಾಣಿ ಸಂಖ್ಯೆ

| |
|---|
| ಜಿಲ್ಲಾಧಿಕಾರಿಗಳ ಕಛೇರಿ |
| 1077 ( 08394–200328) |
| ತಾಲೂಕು ಕಚೇರಿ ಹೊಸಪೇಟೆ |
| 08394–224208 |
| ತಾಲೂಕು ಕಚೇರಿ ಹಗರಿಬೊಮ್ಮನಹಳ್ಳಿ |
| 08397–238255 |
| ತಾಲೂಕು ಕಚೇರಿ ಕೂಡ್ಲಿಗಿ |
| 08391–220225 |
| ತಾಲೂಕು ಕಚೇರಿ ಕೊಟ್ಟೂರು |
| 08391–225400 |
| ತಾಲೂಕು ಕಚೇರಿ ಹಡಗಲಿ |
| 08399–240238 |
| ತಾಲೂಕು ಕಚೇರಿ ಹರಪನಹಳ್ಳಿ |
| 08398–286260 (8095258337) |




ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ಸರ್ಕಾರಿ ಶಾಲೆಗಳ ಏಳ್ಗೆಗೆ ಕಂಠಕವಾಗದಿರಲಿ ನಿರಾಸಕ್ತಿ

## ಸಾರ್ವಜನಿಕ ಶಿಕ್ಷಣದ ಉಳಿವಿಗಾಗಿ ಬದ್ಧತೆ ಅಗತ್ಯ

ಸರ್ಕಾರಿ ಶಾಲೆಗಳ ಸುಧಾರಣೆ ಮತ್ತು ಏಳ್ಗೆಯು ದೇಶದ ಭವಿಷ್ಯಕ್ಕೆ ಅಡಿಪಾಯ. ಇತ್ತೀಚಿನ ವರ್ಷಗಳಲ್ಲಿ ಸರ್ಕಾರವು ಸಾರ್ವಜನಿಕ ಶಿಕ್ಷಣ ಕ್ಷೇತ್ರಕ್ಕೆ ಹೊಸ ಚೈತನ್ಯ ತುಂಬಲು ಹತ್ತು ಹಲವು ಯೋಜನೆಗಳನ್ನು ರೂಪಿಸಿದೆ. ಮೂಲಸೌಕರ್ಯಗಳ ಸುಧಾರಣೆ, ಸ್ಮಾರ್ಟ್ ತರಗತಿಗಳ ಅಳವಡಿಕೆ, ಡಿಜಿಟಲ್ ಕಲಿಕೆ, ಮತ್ತು ಗುಣಮಟ್ಟದ ಬೋಧನೆಗೆ ಒತ್ತು ನೀಡುವ ಮೂಲಕ ಸರ್ಕಾರಿ ಶಾಲೆಗಳನ್ನು ಖಾಸಗಿ ಶಾಲೆಗಳಿಗೆ ಸರಿಸಾಟಿಯಾಗಿ ನಿಲ್ಲಿಸುವ ಪ್ರಯತ್ನಗಳು ಸಾಗುತ್ತಿವೆ. ಈ ಸಕಾರಾತ್ಮಕ ಬದಲಾವಣೆಗಳು ಸಾರ್ವಜನಿಕ ವಲಯದಲ್ಲಿ ಹೊಸ ಭರವಸೆ ಮೂಡಿಸಿವೆ.

**ಪ್ರಗತಿಗೆ ಅಡ್ಡಿಪಡಿಸುವ ನಿರಾಸಕ್ತಿ:** ಆದರೆ, ಈ ಸಕಾರಾತ್ಮಕ ಪ್ರಯತ್ನಗಳ ನಡುವೆಯೂ ಒಂದು ಕಟು ವಾಸ್ತವವಿದೆ. ಸರ್ಕಾರಿ ಶಾಲೆಗಳ ಪ್ರಗತಿಯನ್ನು ಸಹಿಸದ, ಅಥವಾ ತಮ್ಮದೇ ನಿರಾಸಕ್ತಿಯಿಂದ ಶಾಲೆಗಳ ಏಳ್ಗೆಗೆ ಕಂಠಕವಾಗುವ ಕೆಲವು ಶಿಕ್ಷಕರ ನಡೆ ನಿಜಕ್ಕೂ ಆತಂಕಕಾರಿ. ಕೇವಲ ಸಂಬಳಕ್ಕಾಗಿ ಕೆಲಸ ಮಾಡುವ ಮನೋಭಾವ, ತಮ್ಮ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸದಿರುವುದು, ಮಕ್ಕಳ ಭವಿಷ್ಯದ ಬಗ್ಗೆ ಕಾಳಜಿ ವಹಿಸದಿರುವುದು ಮತ್ತು ಹೊಸ ಕಲಿಕಾ ವಿಧಾನಗಳನ್ನು ಅಳವಡಿಸಿಕೊಳ್ಳಲು ಹಿಂದೇಟು ಹಾಕುವುದು – ಇಂತಹ ಮನಸ್ಥಿತಿಗಳು ಸರ್ಕಾರಿ ಶಾಲಾ ವ್ಯವಸ್ಥೆಗೆ ಮಾರಕವಾಗಿ ಪರಿಣಮಿಸುತ್ತಿವೆ.

ಕೆಲವು ಶಿಕ್ಷಕರು, ತಾಂತ್ರಿಕ ಸೌಲಭ್ಯಗಳಿದ್ದರೂ ಅವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳದೆ ಹಳೆಯ ಪದ್ಧತಿಯಲ್ಲೇ ಬೋಧನೆ ಮುಂದುವರಿಸುತ್ತಾರೆ. ಇನ್ನು ಕೆಲವರು, ಪೋಷಕರ ಸಭೆ, ಶಾಲಾ ಅಭಿವೃದ್ಧಿ ಸಮಿತಿ (SDMC) ಸಭೆಗಳಲ್ಲಿ ನಿರಾಸಕ್ತಿ ತೋರಿಸಿ, ಶಾಲಾ ಪ್ರಗತಿಯಲ್ಲಿ ಭಾಗಿಯಾಗುವುದಿಲ್ಲ. ತಮ್ಮ ಮಕ್ಕಳಿಗೆ ಖಾಸಗಿ ಶಾಲೆಗಳಲ್ಲಿ ಶಿಕ್ಷಣ ಕೊಡಿಸಿ, ಸರ್ಕಾರಿ ಶಾಲೆಯಲ್ಲಿ ಬೋಧನೆ ಮಾಡುವ ವಿಪರ್ಯಾಸವೂ ಕೆಲವೆಡೆ ಇದೆ. ಮತ್ತೊಂದು ಸರ್ಕಾರಿ ಶಾಲೆಯ ಶಿಕ್ಷಕರ ಬಗ್ಗೆ ಇನ್ನೊಂದು ಶಾಲೆಯ ಶಿಕ್ಷಕರು ಉತ್ತಮ ಅಭಿಪ್ರಾಯ ಹೊಂದದಿರುವುದು. ಇದು ಸಾರ್ವಜನಿಕ ವಲಯದಲ್ಲಿ ಸರ್ಕಾರಿ ಶಿಕ್ಷಣದ ಬಗ್ಗೆ ನಕಾರಾತ್ಮಕ ಅಭಿಪ್ರಾಯ ಮೂಡಲು ಕಾರಣವಾಗುತ್ತಿದೆ.

**ಬದ್ಧತೆಯ ಅಗತ್ಯ :** ಶಿಕ್ಷಕರು ಕೇವಲ ಸಂಬಳ ಪಡೆಯುವ ನೌಕರರಲ್ಲ, ಅವರು ದೇಶದ ಭವಿಷ್ಯವನ್ನು ರೂಪಿಸುವ ಶಿಲ್ಪಿಗಳು. ಮಕ್ಕಳಲ್ಲಿ ಜ್ಞಾನ, ಕೌಶಲ್ಯ ಮತ್ತು ಮೌಲ್ಯಗಳನ್ನು ತುಂಬುವ ಮಹತ್ತರ ಜವಾಬ್ದಾರಿ ಅವರ ಮೇಲಿದೆ. ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ಬಹುತೇಕ ಮಕ್ಕಳು ಆರ್ಥಿಕವಾಗಿ ಹಿಂದುಳಿದ ವರ್ಗದವರಾಗಿದ್ದು, ಅವರಿಗೆ ಗುಣಮಟ್ಟದ ಶಿಕ್ಷಣ ದೊರೆಯುವಂತೆ ನೋಡಿಕೊಳ್ಳುವುದು ಶಿಕ್ಷಕರ ನೈತಿಕ ಮತ್ತು ಸಾಮಾಜಿಕ ಹೊಣೆಗಾರಿಕೆಯಾಗಿದೆ.

ಸರ್ಕಾರವು ಶಿಕ್ಷಕರಿಗೆ ಉತ್ತಮ ವೇತನ, ಸೌಲಭ್ಯಗಳು ಮತ್ತು ತರಬೇತಿ ಅವಕಾಶಗಳನ್ನು ಒದಗಿಸುತ್ತಿರುವಾಗ, ಅವರ ಕಡೆಯಿಂದಲೂ ಬದ್ಧತೆ ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು, ಸೃಜನಶೀಲ ಬೋಧನಾ ವಿಧಾನಗಳನ್ನು ಬಳಸಿಕೊಳ್ಳುವುದು, ಮಕ್ಕಳೊಂದಿಗೆ ಸೌಹಾರ್ದಯುತ ವಾತಾವರಣ ನಿರ್ಮಿಸುವುದು, ಮತ್ತು ಶಾಲೆಯ ಒಟ್ಟಾರೆ ಪ್ರಗತಿಗೆ ಕೊಡುಗೆ ನೀಡುವುದು ಪ್ರತಿ ಶಿಕ್ಷಕರ ಆದ್ಯತೆಯಾಗಬೇಕು.

**ಭವಿಷ್ಯದ ಹಾದಿ:** ಸರ್ಕಾರವು ಇಂತಹ ನಿರಾಸಕ್ತಿ ತೋರುವ ಶಿಕ್ಷಕರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಲು ಹಿಂಜರಿಯಬಾರದು. ಅದೇ ಸಮಯದಲ್ಲಿ, ಉತ್ತಮವಾಗಿ ಕಾರ್ಯನಿರ್ವಹಿಸುವ ಶಿಕ್ಷಕರನ್ನು ಗುರುತಿಸಿ ಪ್ರೋತ್ಸಾಹಿಸಬೇಕು. ಶಾಲಾ ಮುಖ್ಯೋಪಾಧ್ಯಾಯರು ಮತ್ತು ಮೇಲಾಧಿಕಾರಿಗಳು ನಿಯಮಿತವಾಗಿ ಶಾಲೆಗಳಿಗೆ ಭೇಟಿ ನೀಡಿ, ಶಿಕ್ಷಕರ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಬೇಕು ಮತ್ತು ಅಗತ್ಯ ಮಾರ್ಗದರ್ಶನ ನೀಡಬೇಕು.

ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಬಲಗೊಂಡರೆ ಮಾತ್ರ ಸಮಾನ ಅವಕಾಶಗಳ ಸಮಾಜ ನಿರ್ಮಾಣ ಸಾಧ್ಯ. ಈ ನಿಟ್ಟಿನಲ್ಲಿ, ಸರ್ಕಾರ, ಪೋಷಕರು ಮತ್ತು ಸಮುದಾಯದ ಜೊತೆಗೆ, ಶಿಕ್ಷಕರ ಪಾತ್ರವೂ ಅತ್ಯಂತ ನಿರ್ಣಾಯಕ. ಸರ್ಕಾರಿ ಶಾಲೆಗಳ ಏಳ್ಗೆಗೆ ಕಂಟಕವಾಗುವ ಮನಸ್ಥಿತಿಗಳು ದೂರವಾಗಿ, ಪ್ರತಿಯೊಬ್ಬ ಶಿಕ್ಷಕರೂ ಮಕ್ಕಳ ಭವಿಷ್ಯದ ಬಗ್ಗೆ ಬದ್ಧತೆಯಿಂದ ಕಾರ್ಯನಿರ್ವಹಿಸಿದಾಗ ಮಾತ್ರ ನಮ್ಮ ಸರ್ಕಾರಿ ಶಾಲೆಗಳು ನಿಜವಾದ ಜ್ಞಾನ ದೇಗುಲಗಳಾಗಿ ಹೊರಹೊಮ್ಮಲು ಸಾಧ್ಯ. ಈ ಬದಲಾವಣೆಗೆ ನಾವೆಲ್ಲರೂ ಕೈಜೋಡಿಸಬೇಕಿದೆ.

## ನೀವೂ ಬರೆಯಬಹುದು


ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಕೃತಕ ಚಂದ್ರನನ್ನು ತಯಾರಿಸಿದರೆ




ನಾವು ಬಾಹ್ಯಾಕಾಶಕ್ಕೆ ಬೃಹತ್ ಗಾತ್ರದ ವಸ್ತುಗಳನ್ನು ಹಾರಿಬಿಟ್ಟಿದ್ದೇವೆ. ಬೃಹತ್ ಗಾತ್ರದ ಬಾಹ್ಯಾಕಾಶ ನಿಲ್ದಾಣವನ್ನೇ ನಿರ್ಮಿಸಿದ್ದೇವೆ. ಅಂತರಿಕ್ಷ ಕಕ್ಷೆಯಲ್ಲಿ ಸುಮಾರು 5000ಕ್ಕೂ ಹೆಚ್ಚಿನ ಕೃತಕ ಉಪಗ್ರಹಗಳನ್ನು ಜೋಡಿಸಿದ್ದೇವೆ. ಅವುಗಳಲ್ಲಿ ಕೆಲವು ಈಗಲೂ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತವೆ, ಇನ್ನು ಕೆಲವು ನಿಷ್ಕ್ರಿಯವಾಗಿವೆ. ಅಂತರಿಕ್ಷದಲ್ಲಿ ಇಷ್ಟೆಲ್ಲಾ ಉಪಗ್ರಹಗಳನ್ನು ಜೋಡಿಸಿದ ನಮಗೆ ಪ್ರಮಾಶಮಾನ ವಸ್ತುವನ್ನು ಏಕೆ ನಿರ್ಮಿಸಲಾಗಿಲ್ಲ ಎಂಬ ಪ್ರಶ್ನೆ ಮೂಡದೇ ಇರದು.

ಸೂರ್ಯನಿಂದ ಶಕ್ತಿಶಾಲಿಯಾದ ಬೆಳಕು ಸದಾ ಹೊರಸೂಸುತ್ತಲೇ ಇರುತ್ತದೆ. ಭೂಮಿಯು ಸೂರ್ಯನ ಸುತ್ತ ಸುತ್ತುವುದರಿಂದ ಭೂಮಿಯ ಅರ್ಧ ಭಾಗಕ್ಕೆ ಹಗಲು ಉಳಿದ ಅರ್ದ ಭಾಗಕ್ಕೆ ರಾತ್ರಿಯಾಗಿರುತ್ತದೆ. ರಾತ್ರಿಯಾದ ಭೂ ಭಾಗಕ್ಕೆ ಸೂರ್ಯನ ಬೆಳಕು ಬೀಳುವುದಿಲ್ಲ. ಚಂದ್ರನು ಭೂಮಿಯ ಸ್ವಾಭಾವಿಕ ಉಪಗ್ರಹವಾಗಿದ್ದು, ಭೂಮಿಯನ್ನು ಸುತ್ತುವರಿಯುತ್ತದೆ. ಚಂದ್ರನಿಗೂ ಸ್ವಂತ ಬೆಳಕಿಲ್ಲ. ಅದು ಸೂರ್ಯನ ಬೆಳಕನ್ನು ಪ್ರತಿಫಲಿಸುತ್ತದೆ ಎಂದು ನಮಗೆಲ್ಲಾ ಗೊತ್ತು. ಚಂದ್ರನ ಬೆಳಕು ನೇರವಾಗಿ ಬೀಳುವ ಭೂಭಾಗ ಮಾತ್ರ ರಾತ್ರಿ ವೇಳೆಯೂ ಬೆಳಕಿನಿಂದ ಕೂಡಿರುತ್ತದೆ. ಆದರೆ ಉಳಿದ ಭಾಗ ಕತ್ತಲೆಯಲ್ಲಿಯೇ ಇರುತ್ತದೆ. ಕತ್ತಲೆಯನ್ನು ಹೊಡೆದೋಡಿಸಲು ಮಾನವ ಕೃತಕ ಬೆಳಕಿನ ಆಕರಗಳನ್ನು ಬಳಸಿಕೊಳ್ಳುತ್ತಾನೆ. ಬಹುತೇಕವಾಗಿ ಎಲ್ಲಾ ಕೃತಕ ಬೆಳಕಿನ ಆಕರಗಳು ಇಂಧನ ಬಳಸಿಕೊಳ್ಳುತ್ತವೆ. ಕೃತಕ ಚಂದ್ರನನ್ನು ನಿರ್ಮಿಸಿದರೆ ಕೃತಕ ಬೆಳಕಿನ ಅಗತ್ಯವಿರುವುದಿಲ್ಲ ಅಲ್ಲವೇ? ಎಂಬ ಪ್ರಶ್ನೆ ಮೂಡುವುದು ಸಹಜ. ಮನೆಯ/ಕಟ್ಟಡದ ಹೊರಗಿನ ಕತ್ತಲೆ ಓಡಿಸಲು ಚಂದ್ರನ ಬೆಳಕು ಸಹಾಯವಾಗಬಹುದು. ಆದರೆ ಒಳಗಿನ ಕತ್ತಲೆಗೆ ಕೃತಕ ಬೆಳಕು ಬೇಕೇ ಬೇಕು. ಹೌದು ಪ್ರತಿ ತಿಂಗಳು ಬೀದಿ ದೀಪಗಳನ್ನು ಬೆಳಗಿಸಲು ಸಾಕಷ್ಟು ಪ್ರಮಾಣದ ವಿದ್ಯುತನ್ನು ಬಳಸಿಕೊಳ್ಳುತ್ತೇವೆ. ಅದಕ್ಕೆ ಕೋಟಿಗಟ್ಟಲೆ ಹಣ ವ್ಯಯ ಮಾಡುತ್ತಲೇ ಇದ್ದೇವೆ. ಈ ಎಲ್ಲಾ ಸಮಸ್ಯೆಗಳಿಗೆ ಶಾಶ್ವತ ಪರಿಹಾರವಾಗಿ ಕೃತ ಚಂದ್ರನನ್ನು ತಯಾರಿಸಿದರೆ ಹೇಗೆ? ಎಂಬ ಪ್ರಶ್ನೆ ಕಾಡುವುದು ಸಹಜ. ಒಂದು ವೇಳೆ ಇಂತಹ ಕೃತಕ ಚಂದ್ರನನ್ನು ತಯಾರಿಸಿದರೆ ಏನಾಗುತ್ತದೆ? ಎಂಬುದರ ಕುರಿತು ಈ ಅಧ್ಯಾಯದಲ್ಲಿ ಒಂದಿಷ್ಟು ಚರ್ಚಿಸೋಣ.

ಅಂತರಿಕ್ಷಕ್ಕೆ ಹಾರುವುದು ಅಥವಾ ಅಲ್ಲಿ ವಾಸಿಸುವುದು ಈಗ ಹೊಸದೇನಲ್ಲ. ಈಗಾಗಲೇ ಬೇರೆ ಬೇರೆ ಗ್ರಹಗಳಿಗೆ ಹಲವಾರು ಅಂತರಿಕ್ಷ ನೌಕೆಗಳನ್ನು ಕಳಸಿದ್ದೇವೆ. ಅಲ್ಲದೇ ಬಾಹ್ಯಾಕಾಶದಲ್ಲಿ ಫುಟ್ಬಾಲ್ ಮೈದಾನ ಗಾತ್ರದ ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವನ್ನೂ ಸಹ ನಿರ್ಮಿಸಿಕೊಂಡಿದ್ದೇವೆ. ಅದು ನಮ್ಮ ಭೂಮಿಯಿಂದ 400ಕಿ.ಮೀ ದೂರದಲ್ಲಿದ್ದು, ಭೂಮಿಯನ್ನು ಸುತ್ತುತ್ತಿದೆ. ಕೆಲವು ಕೃತಕ ಉಪಗ್ರಹಗಳು ಅಂತ ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕಿಂತ ಮೇಲಿನ ಕಕ್ಷೆಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಅವುಗಳನ್ನು ಭೂಮಿಯ ಸಮಭಾಜಕ ವೃತ್ತದಿಂದ ಸುಮಾರು 35000 ಕಿ.ಮೀ ಭೂಸ್ಥಾಯಿ ಕಕ್ಷೆಯಲ್ಲಿ ನಿಲ್ಲಿಸಲಾಗಿದೆ. ನಮ್ಮ ನಿಜವಾದ ಚಂದ್ರ 3,80,000 ಕಿ.ಮೀ ದೂರದಿಂದ ಗಂಟೆಗೆ 3700ಕಿ.ಮೀ ವೇಗದಲ್ಲಿ ಭೂಮಿಯನ್ನು ಸುತ್ತುತ್ತಾನೆ.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Hampi Times E-paper
SCAN AND READ

ಒಂದು ವೇಳೆ ಕೃತಕ ಚಂದ್ರನನ್ನು ನಿರ್ಮಿಸುವುದಾದರೆ 3,80,000 ಕಿ.ಮೀ ದೂರದಲ್ಲಿನಿರ್ಮಿಸಲಾಗದು. ಆದರೆ ಅದನ್ನು ನಮ್ಮ ಈಗಿನ ಅಂತರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ ಸಮೀಪದಲ್ಲಿ ನಿರ್ಮಿಸಬಹುದಲ್ಲವೇ?

ಭೂಮಿಗೆ ಭ್ರಮಣೆ ಮತ್ತು ಪರಿಭ್ರಮಣೆ ಇದೆ. ಭೂಮಿಯ ಭ್ರಮಣ ಅವಧಿ 24ಗಂಟೆ ಹಾಗೂ ಪರಿಭ್ರಮಣ ಅವಧಿ 1 ವರ್ಷ ಎಂಬುದು ನಮಗೆಲ್ಲಾ ತಿಳಿದಿದೆ. ಭೂಮಿಯು ಸೆಕೆಂಡಿಗೆ 30,000ಕಿ.ಮೀ ವೇಗದಲ್ಲಿ ತನ್ನ ಸುತ್ತು ತಾನೇ ಸುತ್ತುತ್ತದೆ. ಒಂದುವೇಳೆ ಕೃತಕ ಚಂದ್ರನನ್ನು ನಿರ್ಮಿಸಿದರೆ ಇದೇ ವೇಗದಲ್ಲಿ ಭೂಮಿಯನ್ನು ಸುತ್ತವಂತೆ ನಿರ್ಮಿಸಬೇಕಾಗುತ್ತದೆ. ಕೃತಕ ಚಂದ್ರನ ವೇಗವು ಅದನ್ನು ಇರಿಸುವ ಕಕ್ಷೆಯ ದೂರವನ್ನು ಅವಲಂಬಿಸಿರುತ್ತದೆ. ಕಕ್ಷೆಯು ದೂರವಾದಷ್ಟೂ ವೇಗವು ಹೆಚ್ಚುತ್ತದೆ.

ಚೀನಾದ ಬಾಹ್ಯಾಕಾಶ ಇಂಜಿನಿಯರ್‌ಗಳು ಈಗಾಗಲೇ ಕೃತಕ ಚಂದ್ರನನ್ನು ತಯಾರಿಸಲು ಕೆಲಸ ಮಾಡುತ್ತಿದ್ದಾರೆ. 2022ರ ವೇಳೆಗೆ ಮೂರು ಕೃತಕ ಚಂದ್ರನನ್ನು ಭೂಕಕ್ಷೆಗೆ ಸೇರಿಸಲು ಯೋಜಿಸಿದ್ದರು.. ಚೀನಾದ ಚೆಂಗ್ದು ನಗರದ ಮೇಲೆ ಕೃತಕ ಚಂದ್ರನನ್ನು ನಿರ್ಮಿಸಲಿದ್ದಾರೆ. ಇದನ್ನು ಭೂಮಿಯಿಂದ 35405ಕಿ.ಮೀ(22000 ಮೈಲಿಗಳು) ದೂರದ ಕಕ್ಷೆಗೆ ಸೇರಿಸಲಾಗುತ್ತದೆ. ಇದು 80ಕಿ.ಮೀ(50ಮೈಲಿ) ದೂರದ ವ್ಯಾಸದಲ್ಲಿ ಬೆಳಕನ್ನು ನೀಡುವ ಸಾಮರ್ಥ್ಯ ಹೊಂದಲಿದೆ ಎಂದು ಅಲ್ಲಿನ ಬಾಹ್ಯಾಕಾಶ ವಿಜ್ಞಾನಿಗಳು ತಿಳಿಸಿದ್ದಾರೆ. ನೈಸರ್ಗಿಕ ಚಂದ್ರನಿಗಿಂತ ಎಂಟು ಪಟ್ಟು ಪ್ರಕಾಶಮಾನವಾಗಿ ಹೊಳೆಯುವ ಕೃತಕ ಚಂದ್ರನನ್ನು ನಿರ್ಮಿಸುತ್ತಿದ್ದಾರೆ. ಅದರಿಂದ ಅವರು ವಾರ್ಷಿಕವಾಗಿ 173 ಮಿಲಿಯನ್ ಡಾಲರ್ ಮೊತ್ತದ ವಿದ್ಯುತ್ ಬಿಲ್ ಉಳಿಯುವ ಯೋಜನೆ ಹಾಕಿಕೊಂಡಿದೆ.

1990ರಲ್ಲಿ ರಷ್ಯಾ ದೇಶವೂ ಸಹ ಇಂತಹ ಯೋಜನೆ ತಯಾರಿಸಿತ್ತು. "ಬಾಹ್ಯಾಕಾಶ ಕನ್ನಡಿ" ಹೆಸರಿನಲ್ಲಿ 5 ಕಿ.ಮೀ(3 ಮೈಲಿ) ವಿಸ್ತೀರ್ಣ ಹಾಗೂ ಸ್ವಾಭಾವಿಕ ಚಂದ್ರನಿಗಿಂತ 3 ರಿಂದ 5 ಪಟ್ಟು ಪ್ರಕಾಶಮಾನ ಬೆಳಗುವ ಸೌರ ಪ್ರತಿಫಲಿತ ವ್ಯವಸ್ಥೆಯನ್ನು ರೂಪಿಸುವ ಉದ್ದೇಶ ಹೊಂದಿತ್ತು. ಆದರೆ ಕಾರಣಾಂತರಗಳಿಂದ ಈ ಯೋಜನೆ ವಿಫಲವಾಯಿತು.

ಕೃತಕ ಚಂದ್ರನನ್ನೇನೋ ನಿರ್ಮಿಸಿಬಿಡಬಹುದು. ಆದರೆ ಅದರಿಂದ ಆಗುವ ತೊಂದರೆಗಳನ್ನೂ ಸಹ ಗಮನಿಸಬೇಕಾಗುತ್ತದೆ. ಏನು! ಕೃತಕ ಚಂದ್ರನಿಂದ ತೊಂದರೆಯೇ? ಎಂದು ಹುಬ್ಬೇರಿಸಬೇಡಿ. ಹೌದು ಕೃತಕ ಚಂದ್ರ ಖಂಡಿತವಾಗಿ ನಮ್ಮ ಜೀವನದ ಮೇಲೆ ಸಾಕಷ್ಟು ಬದಲಾವಣೆಗಳನ್ನು ತರುತ್ತಾನೆ. ಕತ್ತಲೆಯು ಕೆಲ ಜೀವಿಗಳಿಗೆ ಬೇಕು. ಬೇಟೆಗೆ, ಸಂಚಾರಕ್ಕೆ ಕೂಟಕ್ಕೆ ಅನುಕೂಲ. ರಾತ್ರಿ ವೇಳೆ ಹೆಚ್ಚು ಬೆಳಕು ನಮ್ಮ ದೇಹಾರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂಬುದು ತಜ್ಞರ ಅಭಿಮತ. ರಾತ್ರಿ ವೇಳೆ ಹೆಚ್ಚು ಬೆಳಕಿನ ಜೊತೆ ಕಾಲ ಕಳೆಯುವವರಲ್ಲಿ ಬೊಜ್ಜು, ಹೃದಯ ಖಾಯಿಲೆ, ಮಧುಮೇಹ ಮತ್ತು ಖಿನ್ನತೆಗೆ ಅವಕಾಶ ನೀಡುತ್ತದೆ ಎಂಬುದು ಅವರ ವಾದ.

ಚಂದ್ರನಿಲ್ಲದ ರಾತ್ರಿ ಆಗಸದಲ್ಲಿನ ಆಕಾಶಕಾಯಗಳನ್ನು ಸ್ಪಷ್ಟವಾಗಿ ನೋಡಬಹುದು. ಆದರೆ ಚಂದ್ರನಿರುವಾಗ ಆಕಾಶಕಾಯಗಳು ಸ್ಪಷ್ಟವಾಗಿ ಕಾಣುವುದಿಲ್ಲ. ಒಂದುವೇಳೆ ಕೃತಕ ಚಂದ್ರನನ್ನು ನಿರ್ಮಿಸಿದರೆ ಶಾಶ್ವತವಾಗಿ ಬರಿಗಣ್ಣಿನಿಂದ ಆಕಾಶ ಕಾಯಗಳನ್ನು ನೋಡುವ ಅವಕಾಶ ಕಳೆದುಕೊಳ್ಳುತ್ತೇವೆ. ಕೃತಕ ಚಂದ್ರನನ್ನು ಆಗಸದಲ್ಲಿ ಬಂಧಿಸಿದರೆ ಆಗಾಗ್ಗೆ ಭೂಮಿಯ ಬಳಿ ಬಂದು ಹೋಗುವ ಧೂಮಕೇತುಗಳು, ಕೆಲವು ವೇಳೆ ರಾತ್ರಿಯಿಡೀ ಬಾನಂಗಳದಿ ಹೂಮಳೆಯಂತೆ ಸುರಿಯುವ ಉಲ್ಕಾಪಾತ, ಕೆಲವು ಪ್ರದೇಶಗಳ ಬಳಿ ಕಾಣುವ ಆರೋರಾ ಮುಂತಾದವುಗಳನ್ನು ಬರಿಗಣ್ಣಿನಿಂದ ನೋಡಲು ಸಾಧ್ಯವೇ?.

# ಅಪ್ಪ



ಅಪ್ಪ ಅಂದರೇನೇ ದೊಡ್ಡ ಶಕ್ತಿ ಗತ್ತು ಗಾಂಭೀರ್ಯ ದೊಡ್ಡ ಜವಾಬ್ದಾರಿ ಅಮ್ಮ ಎಲ್ಲಾ ವನ್ನು ತೋರಸಿಕೊಳ್ಳುತ್ತಾಳೆ ಆದರೆ ಅಪ್ಪ ಏನು ತೋರಸಿಕೊಳ್ಳಲ್ಲನೋವುಗಳನ್ನತೋರಸಿಕೊಂಡರೆ ಎಲ್ಲಿ ನನ್ನ ಹೆಂಡತಿ ಮಕ್ಕಳು ನೋವುಪಡುತ್ತಾರೆ ಅಂತಾನೂ ಮತ್ತೇ ಎಲ್ಲಿ ಸಮಾಜ ಗೇಲಿ ಮಾಡತ್ತೇ ಅಂತಾನೂ ಯಾವುದನ್ನೂ ತೋರಿಸಿಕೊಳ್ಳಲ್ಲ ಹೇಳಿಕೊಳಲ್ಲ ಅಳು ಬಂದರು ಅಳೋದಿಲ್ಲ ಎಲ್ಲಾ ಆಸೆ ನೋವುಗಳನ್ನ ತನ್ನೊಳಗೆ ಬಚ್ಚಿ ಇಟ್ಟುಕೊಳ್ಳುವವನು ಅಪ್ಪ .ಮಕ್ಕಳು ಏನೇ ತಪ್ಪು ಮಾಡಿದರೂ ಸಮಾಜ ಕೇಳೋದು ಒಂದೇ ಮಾತು ಅಮ್ಮ ಅಪ್ಪ ಏನ್ ಕಲಿಸಿದರು ಅಂತಾ ಅಂದರೆ ಸಮಾಜಕ್ಕೆ ಮಗು ಉತ್ತಮ ವ್ಯಕ್ತಿ ಆಗಿ ಬರಬೇಕಾದರೆ ಅಪ್ಪ ಅಮ್ಮನ ಶ್ರಮವೇ ಹೆಚ್ಚಾಗಿರತ್ತೇ ಅಂತಾ...

ಸಾಧನೆ ಮಾಡಿದ ಅದೆಷ್ಟೋ ಸಾಧಕರಿಗೆ ಅವರ ಅಪ್ಪನೇ ರೋಲ್ ಮಾಡೆಲ್ ಆಗಿರುತ್ತಾರೆ ಕಾರಣ ಅಪ್ಪನ ಶ್ರಮ ಪ್ರೋತ್ಸಾಹ ಇಲ್ಲದೆ ಸಾಧನೆ ಮಾಡುವವರು ವಿರಳ. ಅಪ್ಪ ಅಧ್ಭುತವಾದ ಶ್ರೇಷ್ಠವಾದ ಸಂಬಂಧ. ಹಿಂದೆ ಎಲ್ಲಾ ತುಂಬಾ ಕಟ್ಟುನಿಟ್ಟಾಗಿದ್ದ ಅಪ್ಪ ಇಂದು ತುಂಬಾ ಸ್ವತಂತ್ರ ನೀಡಿದ್ದಾನೆ. ಎಷ್ಟು ಅಂತಾ ಕೇಳಿದರೆ ಓದಲಿಕ್ಕೆ ಆಗಲಿ ಉದ್ಯೋಗಕ್ಕೆ ಆಗಲಿ ಸಂಗಾತಿಯನ್ನ ಆಯ್ಕೆ ಮಾಡಿಕೊಳ್ಳಲಿಕ್ಕೆ ಆಗಲಿ, ಮಕ್ಕಳ ಆಯ್ಕನ್ನೇ ಅಪ್ಪ ಒಪಿಕೊಳ್ಳತ್ತಾನೆ!. ಹಿಂದೆ ಅಪ್ಪ ಅಂದರೆ ಭಯ ಮಕ್ಕಳು ತುಂಬಾ ದೂರ ಇರತ್ತಾ ಇದ್ದರು. ಮಾತು ಕೂಡಾ ಅಪ್ಪನ ಜೊತೆಗೆ ತುಂಬಾ ಕಡಿಮೆನೇ ಆದರೆ ಇಂದು ಹಾಗಲ್ಲ ಅಪ್ಪ ಅಂದರೇನೇ ಬೆಸ್ಟ್ ಫ್ರೆಂಡ್ ಹಿತೈಷಿ ಎಲ್ಲಾವೂ ಆತನೇ ಆಗಿರುತ್ತಾನೆ.

ಅಮ್ಮ ಜೀವ ಕೊಡುತ್ತಾಳೆ ಅಪ್ಪ ಬಾಳು ಕೊಡುತ್ತಾನೆ ಎಂಬ ಮಾತಿದೆ. ಬಾಳು ಕೊಡುವ ಅಪ್ಪನನ್ನುಮಕ್ಕಳುಕೆಲವೊಮ್ಮೆಗೋಳಾಡಿಸುವುದೇಕೆ ಎಂಬುದಕ್ಕೆ ಉತ್ತರ ಸಿಗದೇ ಇರಬಹುದು. ಮಕ್ಕಳಿಗೆ ಅಪ್ಪನೇ ಆಕಾಶ ಅಪ್ಪನಿಗೆ ಅಪ್ಪನೇ ಸಾಟಿ. ಅಪ್ಪ ಕೆಲವೊಮ್ಮೆ ಅಮ್ಮನೂ ಆಗಿಬಿಡಬಲ್ಲ. ಜನಕ ಮಹಾರಾಜ ಸೀತಾಮಾತೆಯನ್ನು ಮದುವೆ ಮಾಡಿ ರಾಮನ ಸಂಗಡ ಕಳುಹಿಸುವಾಗ ಒಂದು ಕೋಣೆಯ ತುಂಬಾ ಅರಿಶಿನ ಹರಡಿ 'ಇದರ ಮೇಲೆ ನಿನ್ನ ಹೆಜ್ಜೆ ಗುರುತನ್ನು ಮೂಡಿಸಿ ಹೋಗು. ಇದರ ನೆನಪಲ್ಲಿ ಮಗಳೇ ನೀನಿಲ್ಲದ ಕೊರಗನ್ನು ಮರೆಯುತ್ತೇನೆ' ಎಂದಿದ್ದನಂತೆ. ಹೆಣ್ಣು ಮಕ್ಕಳಿಗೂ ಅಪ್ಪನಿಗೂ ತುಂಬಾ ಆತ್ಮೀಯವಾದ ನಂಟಿಯಿದೆ ಅಂದರೂ ತಪ್ಪಾಗಲ್ಲಿಕ್ಕಿಲ್ಲ.

'ಅಪ್ಪಂದಿರ ದಿನ'ವನ್ನು ಮೊದಲ ಬಾರಿಗೆ 19 ಜೂನ್ 1910ರಲ್ಲಿ ಅಮೇರಿಕದ ವಾಷಿಂಗ್ಟನ್‌ನಲ್ಲಿ ಆಚರಿಸಲಾಗಿತ್ತು. 1916ರಲ್ಲಿ ಅಮೆರಿಕ ಅಧ್ಯಕ್ಷ ವುಡ್ರೋ ವಿಲ್ಸನ್ ತಂದೆಯ ಸೇವೆಗಳನ್ನು ಸ್ಮರಿಸಿ ಎಲ್ಲ ತಂದೆಯಂದಿರಿಗೂ ಶುಭಾಶಯ ತಿಳಿಸುತ್ತಾರೆ. 1966ರಲ್ಲಿ ಅಧ್ಯಕ್ಷ ಲಿಂಡನ್ ಬಿ. ಜಾನ್ಸನ್ ಜೂನ್ ಮೂರನೇ ಭಾನುವಾರವನ್ನು 'ವಿಶ್ವ ಅಪ್ಪಂದಿರ ದಿನ'ವೆಂದು ಘೋಷಣೆ ಮಾಡಿ ಸಹಿ ಹಾಕುವ ಮೂಲಕ ಅಧಿಕೃತವಾಗಿ 'ಅಪ್ಪಂದಿರ ದಿನ'ವನ್ನು ಚಾಲ್ತಿಗೆ ತರುತ್ತಾರೆ.ಅಮ್ಮನಿಗಾಗಿ ಹೇಗೆ ಒಂದು ದಿನ ಇದೇಯೋ ಹಾಗೇಯೇ ಅಪ್ಪಾನಿಗಾಗಿ ಒಂದು ದಿನವಿದೆ. ಭಾರತದ ಸಂಪ್ರದಾಯವೂ ಹೇಳುತ್ತದೆ. ತಂದೆ ತಾಯಿಯ ಋಣ ತೀರಿಸೋದು ಸಾಧ್ಯವಿಲ್ಲ ಆದರೂ ತಂದೆ ತಾಯಿಯ ಋಣವನ್ನ ಅಲ್ಪ ಸಲ್ಪವಾದರೂ ತೀರಿಸಿಕೊಳ್ಳಬೇಕು ಅಂತಾ ಅಪ್ಪನ ಬಗ್ಗೆ ಬರೆದರೆ ಪದಗಳೇ ಸಾಲಲ್ಲಾ ಮುಗಿಯೋದು ಇಲ್ಲ. ನಮಗೋಸ್ಕರ ಎಲ್ಲಾ ತ್ಯಾಗ ಮಾಡಿದ ಎಲ್ಲಾರ ಅಪ್ಪಂದಿರಿಗೂ ಒಂದು ಕೃತಜ್ಞತೇಯನ್ನ ಸಲ್ಲಿಸೋಣ .

ನಾನು ನೋಡಿದ ಮೊದಲ ವೀರ, ಬಾಳು ಕಲಿಸಿದ ಸಲಹೆಗಾರ, ಬೆರಗು ಮೂಡಿಸೋ ಜಾದುಗಾರ ಅಪ್ಪ, ಹಗಲು ಬೆವರಿನ ಕೂಲಿಕಾರ, ರಾತ್ರಿ ಮನೆಯಲಿ ಚೌಕಿದಾರ, ಎಲ್ಲಾ ಕೊಡಿಸುವ ಸಾಹುಕಾರ ಅಪ್ಪ... ಗದರೋ ಮೀಸೆಗಾರ, ಮನಸೇ ಕೋಮಲಾ... ನಿನ್ನಾ ಹೋಲೋ ಕರ್ಣಯಾರಿಲ್ಲ ಅಪ್ಪ ಐ ಲವ್ ಯೂ ಅಪ್ಪ...

– ರೇಷ್ಮಾ ಶೆಟ್ಟಿ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ಕವಿ ಮನಸು

## ಬಾಲಕ ನೀ ಕಾರ್ಮಿಕನಲ್ಲ

ಹೋಟಲ್ನ ಕೆಲಸ ನಿನಗಲ್ಲ
ಕೂಲಿ ಕೆಲಸ ನಿನಗಲ್ಲ
ವ್ಯಾಪಾರ ಕೆಲಸ ನಿನಗಲ್ಲ
ಗಿರಿಣಿ ಕೆಲಸ ನಿನಗಲ್ಲ
ಹೂ ಮಾರುವ ಕೆಲಸ ನಿನಗಲ್ಲ
ಹೊಲದ ಕೆಲಸ ನಿನಗಲ್ಲ
ಬಂಡಿ ಕೆಲಸ ನಿನಗಲ್ಲ
ಗ್ಯಾರೇಜ್ ಕೆಲಸ ನಿನಗಲ್ಲ
ಬಾಲಕ ನೀ... ಕಾರ್ಮಿಕನಲ್ಲ

ಮಗು ನೀ ಸಾಗು ಶಾಲೆಕಡೆ
ಕಲಿಕೆಗಾಗಿ ಸಾಗು ಶಾಲೆಕಡೆ
ಭವಿಷ್ಯಕ್ಕಾಗಿ ಸಾಗು ಶಾಲೆಕಡೆ
ಭಾಷೆಗಾಗಿ ಸಾಗು ಶಾಲೆಕಡೆ
ಲೆಕ್ಕಕಾಗಿ ಸಾಗು ಶಾಲೆಕಡೆ
ಸಮಾಜಕ್ಕಾಗಿ ಸಾಗು ಶಾಲೆಕಡೆ
ಸುದ್ದಿಗಾಗಿ ಸಾಗು ಶಾಲೆಕಡೆ
ದೇಶಕ್ಕಾಗಿ ಸಾಗು ಶಾಲೆಕಡೆ
ನೀ ಬೆಳೆಯಲು ಸಾಗು.....
ಶಾಲೆಕಡೆ
ಬಾಲಕ ಸಾಗು ನೀ.....
ಶಾಲೆಕಡೆ

ಆರ್.ಜಿ.ಬಿ.

## ಬಿಡದಿರು ಕರವನು



ದಡದಲಿ ನೋಡುತ ಕೂರದೆ ನಲಿಯುವ
ಹುಡುಗನ ಮನವಿದು ರಾಮ
ಕಡಲಲಿ ಈಜಲು ಬಾರದೆ ಧುಮುಕಿದೆ
ಬಿಡದಿರು ಕರವನು ರಾಮ

ಹಡೆದವಳಂತೆಯೆ ಮಮತೆಯ ತೋರುತ
ಮಡಿಲಲಿ ಕೂರಿಸು ರಾಮ
ಕೆಡುಕಿನ ಹಾದಿಯ ಮನವಿದು ತುಳಿದಿರೆ
ತಡೆದಿರು ನನ್ನನು ರಾಮ

ನಡುವಲಿ ನಿಂತಿಹೆ ಹರಿಯುವ ನದಿಯಲಿ
ಹಿಡಿದಿರು ಮರೆಯದೆ ರಾಮ
ಚರಣದಿ ಮಣಿದಿಹೆ ಭಕ್ತಿಯ ಮನದಲಿ
ನುಡಿಯುವೆ ರಘಪತಿ ರಾಮ

ಬಡಿಯುವ ಮನದಲಿ ಬರುತಿಹ ಕರದಲಿ
ಬಡಿಗೆಯನಿಡದಿರು ರಾಮ
ದುಡಿಯುವ ಮಂದಿಗೆ ಬಾಳಲಿ ನಿತ್ಯವು
ಕೊಡತಿರು ನೆಮ್ಮದಿ ರಾಮ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಸುತ್ತ ಮುತ್ತ ಕುಂದು-ಕೊರತೆ

**********

ನಿಮ್ಮ ಸುತ್ತಮುತ್ತ ಮೂಲಭೂತ ಸೌಲಭ್ಯಗಳ ಕೊರತೆ, ನಿರ್ವಹಣೆ ನಿರ್ಲಕ್ಷ್ಯ, ಮಳೆ ಹಾನಿ ನೀವು ಕಣ್ಣಾರೆ ಕಂಡಿದ್ದೀರಾ?

ಹಾಗಾದರೆ ಕೂಡಲೇ ಫೋಟೊ ಕ್ಲಿಕ್ಕಿಸಿ, ವೀಡಿಯೋದೊಂದಿಗೆ ನಿಮ್ಮ ಅಭಿಪ್ರಾಯಗಳನ್ನು ಹಂಪಿ ಟೈಮ್ಸ್ ದಿನಪತ್ರಿಕೆ

**9448633038**

ವಾಟ್ಸಪ್ ನಂಬರ್ ಗೆ ಕಳುಹಿಸಿ.

### 16 ನೇ ಹಣಕಾಸಿನ ಆಯೋಗಕ್ಕೆ ಹೆಚ್ಚುವರಿ ಜ್ಞಾಪನಾ ಪತ್ರ ಸಲ್ಲಿಸಿದ ಸಿಎಂ ಸಿದ್ದರಾಮಯ್ಯ

# ಎಲ್ಲಾ ರಾಜ್ಯಗಳಿಗೂ ನ್ಯಾಯ ಒದಗಿಸಿ

**ಹಂಪಿ ಟೈಮ್ಸ್ ನವದೆಹಲಿ**

16 ನೇ ಹಣಕಾಸಿನ ಆಯೋಗಕ್ಕೆ ಹೆಚ್ಚುವರಿ ಮನವಿಯನ್ನು ಸಲ್ಲಿಸುವುದರ ಜೊತೆಗೆ ಜೊತೆ ಒಕ್ಕೂಟದ ವ್ಯವಸ್ಥೆಯನ್ನು ಬಲಪಡಿಸಿ ಎಲ್ಲಾ ರಾಜ್ಯಗಳಿಗೂ ನ್ಯಾಯ ಒದಗಿಸಬೇಕು ಎಂದು ಒತ್ತಿ ಹೇಳಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಶುಕ್ರವಾರ 16 ನೇ ಹಣಕಾಸಿನ ಆಯೋಗದ ಸಭೆಯಲ್ಲಿ ಭಾಗವಹಿಸಿದ ನಂತರ ನಡೆದ ಪತ್ರಿಕಾಗೋಷ್ಟಿಯಲ್ಲಿ ಮಾತನಾಡಿದರು. 16 ನೇ ಹಣಕಾಸಿನ ಆಯೋಗದ ಅಧ್ಯಕ್ಷ ಅರವಿಂದ ಪರಗಾರಿಯಾ ಮತ್ತು ಸದಸ್ಯರನ್ನು ಭೇಟಿಯಾಗಿ ಹೆಚ್ಚುವರಿ ಜ್ಞಾಪನಾ ಪತ್ರವನ್ನು ಆಯೋಗಕ್ಕೆ ಸಲ್ಲಿಸಲಾಗಿದೆ ಎಂದರು.

**ಯಾರಿಗೂ ಅನ್ಯಾಯವಾಗಬಾರದು**

2011-2012 ರಲ್ಲಿ ಕರ್ನಾಟಕ ರಾಜ್ಯವು ಜಿಡಿಪಿಗೆ ಶೇ 7ರಷ್ಟು ಕೊಡುಗೆ ನೀಡಿದ್ದರೆ, 2024-25 ರಲ್ಲಿ ರಾಜ್ಯವು ದೇಶದ ಒಟ್ಟು ಜಿಡಿಪಿಗೆ ಸುಮಾರು ಶೇ.8.7ರಷ್ಟುಕೊಡುಗೆ ನೀಡುತ್ತಿದೆ. ಜಿಎಸ್ ಟಿ ಸಂಗ್ರಹಣೆಯಲ್ಲಿ ನಮ್ಮ ರಾಜ್ಯ ದೇಶದಲ್ಲಿಯೇ 2 ನೇ ಸ್ಥಾನದಲ್ಲಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇ 5 ರಷ್ಟಿದ್ದೇವೆ. 5 ವರ್ಷಗಳಿಗೊಮ್ಮೆ ಹಣಕಾಸಿನ ಆಯೋಗ ರಚನೆಯಾಗುತ್ತದೆ. ಸಂವಿಧಾನದ ಅನುಚ್ಛೇದ 180 ಪ್ರಕಾರ ತೆರಿಗೆ ಹಂಚಿಕೆಯಾಗಬೇಕೆಂದು ಹೇಳಲಾಗಿದ್ದು ಯಾರಿಗೂ ಅನ್ಯಾಯವಾಗಬಾರದೆಂದು ಸ್ಪಷ್ಟಪಡಿಸಿದೆ ಎಂದರು.

**5 ವರ್ಷಗಳಲ್ಲಿ ರಾಜ್ಯದ ಪಾಲು ಒಟ್ಟು 68,275 ಕೋಟಿ ರೂ.ಗಳು ಕಡಿಮೆಯಾಗಿದೆ**

ಕರ್ನಾಟಕ ರಾಜ್ಯ ಪ್ರತಿ ವರ್ಷ 4.5 ಲಕ್ಷ ಕೋಟಿ ತೆರಿಗೆ ನೀಡುತ್ತದೆ. ಒಂದು ರೂ.ಗಳು ನೀಡಿದರೆ 15 ಪೈಸೆ ನಮಗೆ ವಾಪಸ್ಸು ಬರುತ್ತದೆ. ಈ ಅನ್ಯಾಯ 16 ನೇ ಹಣಕಾಸು ಆಯೋಗದಲ್ಲಿ ಆಗಬಾರದು. 14 ನೇ ಹಣಕಾಸು ಆಯೋಗದಲ್ಲಿ ನಮ್ಮ ತೆರಿಗೆ ಪಾಲು 4.713% ಕ್ಕೆ ಮತ್ತು 15 ನೇ ಹಣಕಾಸು ಆಯೋಗದಲ್ಲಿ ತೆರಿಗೆ ಪಾಲು 3.647% ಕ್ಕೆಇಳಿಕೆ ಮಾಡಿದ್ದರಿಂದ ತೆರಿಗೆ ಹಂಚಿಕೆಯಲ್ಲಿ ನಮ್ಮ ಪಾಲನ್ನು ಒಟ್ಟಾರೆ 23% ರಷ್ಟು ಇಳಿಕೆ ಮಾಡಲಾಗಿದೆ. 5 ವರ್ಷಗಳಲ್ಲಿ ಒಟ್ಟು 68,275 ಕೋಟಿ ರೂ.ಗಳು ಕಡಿಮೆಯಾಗಿದೆ ಎಂದರು.

### ಬೆಂಗಳೂರು ಅಭಿವೃದ್ಧಿಗೆ 1.ಲಕ್ಷ 15 ಸಾವಿರ ಕೋಟಿ ಒದಗಿಸಲು ಮನವಿ

ಬೆಂಗಳೂರು ನಗರ ವೇಗವಾಗಿ ಅಭಿವೃದ್ಧಿಯಾಗುತ್ತಿದ್ದು, ನಮ್ಮ ಮನವಿಯಲ್ಲಿ ಕೋರಿರುವಂತೆ ಅನುದಾನವನ್ನು ಒದಗಿಸದೇ ಹೋದರೆ ಬೆಂಗಳೂರು ಅಭಿವೃದ್ಧಿಗೆ 1.ಲಕ್ಷ 15 ಸಾವಿರ ಕೋಟಿಗಳನ್ನು ಒದಗಿಸಬೇಕು ಎಂದು ಕೋರಿದೆ ಎಂದರು.

**ವಿಶೇಷ ಅನುದಾನ ಒದಗಿಸಿ**

ಕಲ್ಯಾಣ ಕರ್ನಾಟಕದಲ್ಲಿ ಏಳು ಜಿಲ್ಲೆಗಳನ್ನು ಒಳಗೊಂಡಿದ್ದು 5 ಜಿಲ್ಲೆಗಳ ವಾರ್ಷಿಕ ವರಮಾನವು ರಾಜಸ್ಥಾನ,ಬಿಹಾರ, ಉತ್ತರ ಪ್ರದೇಶ, ಒರಿಸ್ಸಾ ಮತ್ತು ಪಶ್ಚಿಮ ಬಂಗಾಲದ ಸರಿಸಮಾನವಿದೆ. ಮಲೆನಾಡು ಪ್ರದೇಶಗಳಲ್ಲಿ ನಮಗೆ ಪ್ರವಾಹ, ಭೂ ಕುಸಿತದಂತಹ ಸಮಸ್ಯೆಗಳು ತಲೆದೋರುತ್ತವೆ. ಅದ್ದರಿಂದ ವಿಶೇಷ ಅನುದಾನ ಒದಗಿಸಬೇಕು ಎಂದು ಕೋರಿದೆ.

**ವಿವೇಚನಾ ಅನುದಾನವು 0.3% ಗಿಂತ ಹೆಚ್ಚಾಗಬಾರದು**

ಕೇಂದ್ರ ಸರ್ಕಾರದ ವಿವೇಚನಾ ಅನುದಾನವು 0.3% ಗಿಂತ ಹೆಚ್ಚಾಗಬಾರದು ಎಂದು ಮನವಿ ಮಾಡಲಾಗಿದೆ. ವಿತ್ತೀಯ ಹೊಣೆಗಾರಿಕೆ ಕಾಯ್ದೆಯ ಮೂರು ಮಾನದಂಡಗಳ ಪ್ರಕಾರ ನಡೆದುಕೊಂಡಿರುವ ಕರ್ನಾಟಕ ರಾಜ್ಯ . ಹಾಗಾಗಿ ಆರ್ಥಿಕವಾಗಿ ರಾಜ್ಯ ಸದೃಢವಾಗಿದೆ ಎಂದು ಆಯೋಗದ ಗಮನಕ್ಕೆ ತರಲಾಗಿದೆ. ಹೆಚ್ಚುವರಿ ಮನವಿಯಲ್ಲಿಯೂ ಹೇಳಲಾಗಿದೆ. ಇದೊಂದು ಸಾಂವಿಧಾನಿಕ ಸಂಸ್ಥೆಯಾಗಿರುವುದರಿಂದ ಎಲ್ಲಾ ರಾಜ್ಯಗಳಿಗೂ ನ್ಯಾಯ ಒದಗಿಸುವ ಕೆಲಸವಾಗಬೇಕು. ಕರ್ನಾಟಕಕ್ಕೆ ಅನ್ಯಾಯವಾಗಬಾರದು ಎಂದು ಕೋರಲಾಗಿದೆ.

**ತೆರಿಗೆ ಹಂಚಿಕೆ ವೈಜ್ಞಾನಿಕವಾಗಿ ಆಗಬೇಕು**

ಕೇರಳ, ತಮಿಳುನಾಡಿಗೂ ನಮ್ಮಷ್ಟೇ ನಷ್ಟವಾಗಿದ್ದರೂ, ಅವರಿಗೆ ರಾಜಸ್ವ ಕೊರತೆ ಅನುದಾನವನ್ನು ನೀಡಲಾಗಿದೆ. ನಮಗೇಕೆ ಕೊಟ್ಟಿಲ್ಲ ಎಂದು ಪ್ರಶ್ನಿಸಲಾಗಿದೆ. ಜನಸಂಖ್ಯೆ ಆಧಾರದ ಮೇಲೆ ಅನುದಾನ ಹಂಚಿಕೆ ಮಾಡಬಾರದು



ಎಂದು ನಾವು ಹೇಳುವುದಿಲ್ಲ. ಆದರೆ ತೆರಿಗೆ ಹಂಚಿಕೆ ವೈಜ್ಞಾನಿಕವಾಗಿ ಮಾಡಬೇಕು ಎಂದು ಕೋರಲಾಗಿದೆ ಎಂದರು.

ಈ ಬಗ್ಗೆ ಇತರೆ ರಾಜ್ಯಗಳು ಧ್ವನಿ ಎತ್ತಿವೆ ಎಂದೂ ಮುಖ್ಯಮಂತ್ರಿಗಳು ತಿಳಿಸಿದರು. ಸಭೆಯು ಒಂದೂ ಕಾಲ ಗಂಟೆಗಳ ಕಾಲ ಸೌಹಾರ್ದಯುತವಾಗಿ ನಡೆದಿದ್ದು, ಆಯೋಗದ ಅಧ್ಯಕ್ಷರು ನಮ್ಮ ಸಲಹೆಗಳನ್ನು ಸ್ವೀಕರಿಸಿದ್ದಾರೆ. ಸಭೆಯಲ್ಲಿ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರಾದ ಬಸವರಾಜ ರಾಯರೆಡ್ಡಿ, ಮುಖ್ಯ ಕಾರ್ಯದರ್ಶಿ ಡಾ: ಶಾಲಿನಿ ರಜನೀಶ್, ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ , ಮುಖ್ಯಮಂತ್ರಿಗಳ ಕಾರ್ಯದರ್ಶಿ ಅಂಜುಂ ಪರ್ವೇಜ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು ಎಂದು ತಿಳಿಸಿದರು.

**ಸೆಸ್ ಮತ್ತು ಸರ್ಚಾರ್ಜ್ ಶೇ 5ರಷ್ಟನ್ನು ಮೀರಬಾರದು**

ಇದರೊಂದಿಗೆ ಕೇಂದ್ರ ಸರ್ಕಾರ ಸೆಸ್ ಮತ್ತು ಸರ್ಜಾರ್ಜ್ ನಲ್ಲಿ ನಮಗೆ ಮಾತ್ರವಲ್ಲ ಯಾವ ರಾಜ್ಯಕ್ಕೂ ಪಾಲು ಕೊಡುವುದಿಲ್ಲ. ಕರ್ನಾಟಕದಿಂದ 2024-25ರಲ್ಲಿ ಒಟ್ಟು 5,41,709 ಕೋಟಿ ಸಂಗ್ರಹವಾಗಿದೆ. 8,084 ಕೋಟಿ ರೂ.ಗಳು ಕರ್ನಾಟಕ್ಕೆ ನಷ್ಟವಾಗಿದೆ. ಸೆಸ್ ಮತ್ತು ಸರ್ಚಾರ್ಜ್ ಶೇ 5ರಷ್ಟನ್ನು ಮೀರಬಾರದು, ಒಂದು ವೇಳೆ 5% ಮೀರಿದರೆ ರಾಜ್ಯಗಳ ತೆರಿಗೆ ಹಂಚಿಕೆಯ ಪಾಲಿನಲ್ಲಿ ಶೇ 50 ರಷ್ಟು ಹೆಚ್ಚಳ ಮಾಡಬೇಕು, ಎಂದು ಮನವಿ ಮಾಡಲಾಗಿದೆ ಎಂದರು.

**ತೆರಿಗೆ ನ್ಯಾಯಯುತವಾಗಿ ಹಂಚಿಕೆಯಾಗಬೇಕು**

ಕರ್ನಾಟಕ ಆರ್ಥಿಕವಾಗಿ ಬೆಳವಣಿಗೆಯಾದರೆ ಕೇಂದ್ರ ಸರ್ಕಾರದ ಬೆಳವಣಿಗೆಯೂ ಆಗುತ್ತದೆ. ಹಾಗಾಗಿ ನ್ಯಾಯಯುತವಾಗಿ ಹಂಚಿಕೆಯಾಗಬೇಕು ಎಂದು ಕೋರಲಾಗಿದೆ ಎಂದರು.

**ರಾಜಸ್ವ ಕೊರತೆ ಅನುದಾನ ರಾಜ್ಯಕ್ಕಿಲ್ಲ**

ರಾಜ್ಯದ ತಲಾದಾಯವು ಆರು ಜಿಲ್ಲೆಗಳನ್ನು ಹೊರತುಪಡಿಸಿ ಕಡಿಮೆಯಿದೆ. ಕಲ್ಯಾಣ ಕರ್ನಾಟಕದಲ್ಲಿ ಇನ್ನೂ ಕಡಿಮೆಯಿದ್ದು, ಇದು ರಾಜಸ್ಥಾನ, ಒರಿಸ್ಸಾ ಮತ್ತು ಪಶ್ಚಿಮ ಬಂಗಾಲದ ಸರಿಸಮಾನವಾಗಿದೆ. ರಾಜಸ್ವ ಕೊರತೆ ಇರುವ ರಾಜ್ಯಗಳಿಗೆ ಈ ಕೊರತೆಯನ್ನು ತುಂಬಲು ಅನುದಾನವನ್ನು ನೀಡಲಾಗುತ್ತದೆ. ಆದರೆ ತೆರಿಗೆ ಹಂಚಿಕೆಯಲ್ಲಿ ನಮ್ಮಷ್ಟೇ ನಷ್ಟವಾಗಿರುವ ಕೇರಳಕ್ಕೆ ಕಳೆದ ವರ್ಷ 38000 ಕೋಟಿಗಳನ್ನು ರಾಜಸ್ವ ಕೊರತೆ ತುಂಬಲು ಒದಗಿಸಲಾಗಿದೆ. ಕರ್ನಾಟಕಕ್ಕೆ ಯಾವುದೇ ರಾಜಸ್ವ ಕೊರತೆ ಅನುದಾನ ಬಂದಿಲ್ಲ ಎಂದು ತಿಳಿಸಿದರು.

**ಕೇಂದ್ರ ಸರ್ಕಾರ ವಿಶೇಷ ಅನುದಾನವನ್ನು ಒದಗಿಸಲು ನಿರಾಕರಿಸಿತು**

15 ನೇ ಹಣಕಾಸಿನ ಆಯೋಗವು ರಾಜ್ಯಕ್ಕೆ 5495 ಕೋಟಿ ರೂ.ಗಳ ವಿಶೇಷ ಅನುದಾನವನ್ನು ಕರ್ನಾಟಕ, ತೆಲಂಗಾಣ ಮತ್ತು ಮಿಜೋರಾಂ ರಾಜ್ಯಗಳಿಗೆ ಒದಗಿಸಬೇಕೆಂದು ಶಿಫಾರಸ್ಸು ಮಾಡಿತ್ತು. ಆದರೆ ಕೇಂದ್ರ ಸರ್ಕಾರ ಈ ಅನುದಾನವನ್ನು ಒದಗಿಸಲು ನಿರಾಕರಿಸಿತು. ಇದಲ್ಲದೇ ಪೆರಿಫೆರಲ್ ರಿಂಗ್ ರಸ್ತೆ ಗೆ 3000 ಕೋಟಿ ಹಾಗೂ ಕೆರೆಗಳ ಅಭಿವೃದ್ಧಿಗೆ 3000 ಕೋಟಿ ನೀಡಬೇಕೆಂದು ಶಿಫಾರಸ್ಸು ಮಾಡಿತ್ತು. ಎರಡೂ ಸೇರಿ 11495 ಕೋಟಿ ರೂ.ಗಳನ್ನು ಒದಗಿಸಬೇಕೆಂದು 15 ನೇ ಹಣಕಾಸಿನ ಆಯೋಗವು ಶಿಫಾರಸ್ಸು ಮಾಡಿತ್ತು ಎಂದು ಮುಖ್ಯಮಂತ್ರಿಗಳು ವಿವರಿಸಿದರು.

# ಹರಟೆ ಕಟ್ಟೆಗಳು ಜ್ಞಾನದ ಆಗರ!

### ಅದೊಂದು ಅನೌಪಚಾರಿಕ ಪಾಠಶಾಲೆ ಇದ್ದಂತೆ। ಏನಪ್ಪಾ, ಈ ಮಳೆ ಹೀಗೇ ಮುಂದುವರಿದರೆ ನಮ್ಮ ಬೆಳೆ ಕಥೆ ಏನು?"



ಗ್ರಾಮೀಣ ಭಾರತದ ಪ್ರತಿ ಹಳ್ಳಿಯಲ್ಲೂ ಒಂದು ಹರಟೆ ಕಟ್ಟೆ ಇರುತ್ತದೆ. ಇದನ್ನು ಕೆಲವರು ಸೋಮಾರಿಗಳ ಕಟ್ಟೆ ಎನ್ನವುದುಂಟು, ಅದು ಕೇವಲ ಒಂದು ಸ್ಥಳವಲ್ಲ, ಅದೊಂದು ಜೀವಂತ ವೇದಿಕೆ, ಹಳ್ಳಿಯ ಹೃದಯ ಬಡಿತವನ್ನು ಕೇಳಬೇಕೆಂದರೆ ಈ ಹರಟೆ ಕಟ್ಟೆಗೆ ಬನ್ನಿ. ಇದೊಂದು ಸಾರ್ವಜನಿಕ ಆಸ್ಥಾನ! ಹಳ್ಳಿಯ ರೇಡಿಯೋ, ಟಿ.ವಿ, ಸಾಮಾಜಿಕ ಜಾಲತಾಣ, ನ್ಯಾಯಾಲಯ, ಪಾಠಶಾಲೆ ಎಲ್ಲವೂ ಇಲ್ಲೇ! ಇಲ್ಲಿ ಕೇವಲ ಮಾತುಗಳಿಲ್ಲ, ಬದುಕಿನ ಅನುಭವ, ಜ್ಞಾನದ ಹರಿವು, ಸುಖ-ದುಃಖಗಳ ವಿನಿಮಯ ಮತ್ತು ಗ್ರಾಮದ ಆಗುಹೋಗುಗಳ ಸಮಗ್ರ ಚಿತ್ರಣ ಸಿಗುತ್ತದೆ, ಅದೂ ಸಣ್ಣ ಮಸಾಲೆ ಬೆರೆಸಿ!

**ಗ್ರಾಮೀಣರ ನಂಟು, ಚರ್ಚೆಗಳು ಮತ್ತು ಊರಿನ ಉಸಾಬರಿ**

ಹಳ್ಳಿಯ ಜನರಿಗೆ ಹರಟೆ ಕಟ್ಟೆ ಎಂದರೆ ಒಂದು ಬಂಧುತ್ವ. ಇಲ್ಲಿ ಜಾತಿ, ಅಂತಸ್ತು, ವಯಸ್ಸಿನ ಭೇದವಿಲ್ಲದೆ ಎಲ್ಲರೂ ಒಂದಾಗಿ ಕೂರುತ್ತಾರೆ. ಬೆಳಿಗ್ಗೆ ಹೊಲಕ್ಕೆ ಹೋಗುವ ಮುನ್ನ, ಸಂಜೆ ಕೆಲಸ ಮುಗಿದ ನಂತರ, ಅಥವಾ ದಿನದ ಯಾವುದೇ ಬಿಡುವಿನ ವೇಳೆಯಲ್ಲಿ ಇಲ್ಲಿ ಜನರ ಗುಂಪು ಸೇರಿರುತ್ತದೆ. ಬೆಳೆಗಳ ಬಗ್ಗೆ, ಮಳೆಯ ಬಗ್ಗೆ, ಸರ್ಕಾರದ ಯೋಜನೆಗಳ ಬಗ್ಗೆ, ಮಕ್ಕಳ ಮದುವೆ ಬಗ್ಗೆ, ಹೀಗೆ ಯಾವುದೇ ವಿಷಯವಾಗಲಿ, ಇಲ್ಲಿ ಕೂತವರೆಲ್ಲರೂ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳು ತ್ತಾರೆ. ಇವು ಕೇವಲ ಚರ್ಚೆಗಳಲ್ಲ, ಸಮಸ್ಯೆ ಗಳಿಗೆ ಪರಿಹಾರ ಕಂಡುಕೊಳ್ಳುವ ಸಾಮೂಹಿಕ ಪ್ರಯತ್ನಗಳು. "ಏನಪ್ಪಾ, ಈ ಮಳೆ ಹೀಗೇ ಮುಂದುವರಿದರೆ ನಮ್ಮ ಬೆಳೆ ಕಥೆ ಏನು?" ಎಂದು ಒಬ್ಬರು ಹೇಳಿದರೆ, "ನಿನ್ನ ಚಿಂತೆ ಬೇಡ ಕಣಯ್ಯ, ಹಿಂದೊಮ್ಮೆ ಇದಕ್ಕಿಂತ ದೊಡ್ಡ ಮಳೆ ಬಂದು ಬದುಕುಳಿದಿದ್ವಿ!" ಎಂದು ಇನ್ನೊಬ್ಬರು ಹಳೆಯ ಕಥೆಗಳನ್ನು ಹೇಳಿ ಧೈರ್ಯ ತುಂಬುತ್ತಾರೆ.



**ತನಗೆ ಬೇಡದಿದ್ದರೂ ಊರಿನ ಉಸಾಬರಿ ಮಾತುಗಳು**

ಇದು ಹರಟೆ ಕಟ್ಟೆಯ ಹೆಗ್ಗುರುತು. ಇಲ್ಲಿ ಕೇಳುವ ಒಂದು ಮಾತು ಹಳ್ಳಿಯ ಇನ್ನೊಂದು ತುದಿಗೆ ತಲುಪಲು ನಿಮಿಷ ಸಾಕು! "ಹಿಂದಿನ ವಾರ ರಾಮಪ್ಪನ ಮನೆಯಲ್ಲಿ ದೊಡ್ಡ ಜಗಳ ಆಯ್ತಂತೆ, ಅವರ ಮಗ ದುಡ್ಡು ಕೇಳಿದ್ದಕ್ಕೆ, ಆಕೆ ಮನೆಯಲ್ಲಿದ್ದ ಪಾತ್ರೆ ಪಗಡೆ ಎಸೆದಳಂತೆ!" ಅಬ್ಬಾ, ಇದರ ಬಣ್ಣನೆ ಕೇಳಲು ಕಣ್ಣು, ಕಿವಿ ಎರಡೂ ಸಾಲದು. ಕೆಲವೊಮ್ಮೆ ಇದು ಅತಿಯೆನಿಸಿದರೂ, ಇದೊಂದು ರೀತಿಯಲ್ಲಿ ಹಳ್ಳಿಯ ಜನರ ಪರಸ್ಪರ ಕಾಳಜಿಯ ಪ್ರತೀಕ. ಒಬ್ಬರಿಗೆ ಕಷ್ಟ ಬಂದಾಗ, ಎಲ್ಲರೂ ಸಹಾನುಭೂತಿ ತೋರಿ, ತಮ್ಮ ಕೈಲಾದ ಸಹಾಯ ಮಾಡಲು ಮುಂದಾಗುತ್ತಾರೆ. ಮದುವೆ, ಹಬ್ಬ, ಮಗು ಹುಟ್ಟಿದಾಗ , ಇಂತಹ ಸಂತೋಷದ ಸಂದರ್ಭಗಳಲ್ಲಿ ಹರಟೆ ಕಟ್ಟೆಯಲ್ಲಿ ನಲಿವಿನ ಮಾತುಗಳು, ಹಾಸ್ಯ, ತಮಾಷೆಗಳು ತುಂಬಿರುತ್ತವೆ. "ಲಕ್ಷ್ಮೀ ಮದುವೆಗೆ ಮೈತುಂಬಾ ಬಂಗಾರ ಹಾಕಿದ್ರಂತೆ, ನಾವೂ ಅಷ್ಟು ಹಾಕ್ತಿವಿ!" ಎಂದು ಹಳ್ಳಿಯ ಇನ್ನೊಬ್ಬರ ಮನೆ ಮದುವೆಗೂ ಇಲ್ಲಿ ಪೈಪೋಟಿ ಶುರುವಾಗುತ್ತದೆ.

**ಜ್ಞಾನದ ಹರಿವು, ಅನುಭವ ವಿನಿಮಯ, "ಗುಪ್ತಚರ ಇಲಾಖೆ"!**

ಹರಟೆ ಕಟ್ಟೆ ಒಂದು ಅನೌಪಚಾರಿಕ ಪಾಠಶಾಲೆ ಇದ್ದಂತೆ. ಹಿರಿಯರು ತಮ್ಮ ಅನುಭವಗಳನ್ನು ಕಿರಿಯರೊಂದಿಗೆ ಹಂಚಿಕೊಳ್ಳುತ್ತಾರೆ. ಕೃಷಿಯ ವಿಧಾನಗಳು, ಹಳ್ಳಿಯ ಸಂಪ್ರದಾಯಗಳು, ಹಿಂದಿನ ಕಾಲದ ಕಥೆಗಳು, ಆಯುರ್ವೇದ ಪದ್ಧತಿಗಳು, ಹೀಗೆ ಹಲವು ವಿಷಯಗಳ ಬಗ್ಗೆ ಇಲ್ಲಿ ಜ್ಞಾನದ ಹರಿವು ನಿರಂತರವಾಗಿರುತ್ತದೆ. "ಮಳೆ ಇಲ್ಲ ಅಂದ್ರೆ ಈ ಬಾರಿ ಬೇವಿನ ಸೊಪ್ಪಿನ ಕಷಾಯ ಹಾಕಿ ನೋಡು, ಹಿಂದೊಮ್ಮೆ ನಮ್ಮ ತಾತ ಹೇಳಿದ್ರು," ಎಂದು ಒಬ್ಬರು ಸಲಹೆ ನೀಡಿದರೆ, ಇನ್ನೊಬ್ಬರು "ನಮ್ಮಪ್ಪನ ಕಾಲದಲ್ಲಿ ಮಳೆಯಾಗ್ಲಿಲ್ಲ ಅಂದಾಗ, ಮಸೀದಿ ಹತ್ರ ಹೋಗಿ ಪ್ರಾರ್ಥನೆ ಮಾಡಿದ್ವಿ, ಕೂಡಲೇ ಮಳೆ ಬಂತು," ಎಂದು ಹಳೆಯ ಕಥೆ ಸೇರಿಸಿಬಿಡುತ್ತಾರೆ.

ಆದರೆ, ಹರಟೆ ಕಟ್ಟೆಯ ಬಹು ದೊಡ್ಡ ಆಕರ್ಷಣೆ ಅಂದರೆ, ಪ್ರತಿ ಮನೆಯ ಕಾದಾಟ, ಸಂಭ್ರಮ ಹಾಗೂ ಮುಖ್ಯವಾಗಿ ಮಕ್ಕಳ ಮದುವೆ ಮತ್ತು ವಿದ್ಯಾಭ್ಯಾಸದ ಚರ್ಚೆಗಳು! "ಅಲ್ಲಾ, ಆ ಸಿದ್ದಪ್ಪನ ಮಗಳ ಮದುವೆಗೆ ಯಾವ ಸಂಬಂಧ ನೋಡಿದ್ರಂತೆ? ಅವರು ಸಿಟೀಲಿ ದೊಡ್ಡ ಕೆಲಸ ಮಾಡ್ತಾರಂತೆ!" ಅಥವಾ "ರಾಮಣ್ಣನ ಮಗ ಇಂಜಿನಿಯರಿಂಗ್ ಸೇರಿದ್ದನಂತೆ, ಅವನಿಗೆ ಬೆಂಗಳೂರಿನಲ್ಲಿ ಒಳ್ಳೆ ಕೆಲಸ ಸಿಕ್ಕಿದೆಯಂತೆ, ನಾವೂ ನಮ್ಮ ಮಕ್ಕಳಿಗೆ ಅದನ್ನೇ ಹೇಳಬೇಕು," ಇಂತಹ ಚರ್ಚೆಗಳು ಇಲ್ಲಿ ಸಾಮಾನ್ಯ. ಯಾರ ಮನೆಯಲ್ಲಿ ಜಗಳ ನಡೆಯುತ್ತಿದೆ, ಯಾರು ಹೊಸ ಮೊಬೈಲ್ ತಂದಿದ್ದಾರೆ, ಯಾರು ಊರಿಗೆ ಹೊಸದಾಗಿ ಬಂದಿದ್ದಾರೆ. ಇವೆಲ್ಲವೂ ಹರಟೆ ಕಟ್ಟೆಯ ಜನರ ಗಮನ ಸೆಳೆಯುತ್ತವೆ. ಹರಟೆ ಕಟ್ಟೆಯ ಜನರೇ ಹಳ್ಳಿಯ ಅತ್ಯುತ್ತಮ "ಗುಪ್ತಚರ ಇಲಾಖೆ" ಎಂದು ಹಾಸ್ಯವಾಗಿ ಹೇಳಬಹುದು. ಎಲ್ಲ ವಿಷಯಗಳು ಇಲ್ಲಿ ತನಿಖೆಯಾಗಿ, ಚರ್ಚೆಯಾಗಿ, ಕೆಲವೊಮ್ಮೆ ಸ್ವಲ್ಪ ಉತ್ಪ್ರೇಕ್ಷೆಯಾಗಿ ಹರಡುತ್ತವೆ.

**ಹರಟೆ ಕಟ್ಟೆಯ ಸಾಮಾಜಿಕ ಪಾತ್ರ**

ಹರಟೆ ಕಟ್ಟೆ ಕೇವಲ ಮಾತುಕತೆಗಳ ಕೇಂದ್ರವಲ್ಲ, ಅದೊಂದು ಸಾಮಾಜಿಕ ನಿಯಂತ್ರಣದ ಕೇಂದ್ರವೂ ಹೌದು. ಇಲ್ಲಿ ನಡೆಯುವ ಚರ್ಚೆಗಳು, ನಿರಂತರವಾಗಿ ಹಳ್ಳಿಯ ಜನರ ನಡವಳಿಕೆಗಳನ್ನು, ಆಚಾರ-ವಿಚಾರ ಗಳನ್ನು ರೂಪಿಸುತ್ತವೆ. ಯಾರಾದರೂ ತಪ್ಪು ಮಾಡಿದರೆ, ಇಲ್ಲಿ ಅದಕ್ಕೆ ತಕ್ಕ ಟೀಕೆಗಳು ವ್ಯಕ್ತವಾಗುತ್ತವೆ. ಒಳ್ಳೆಯ ಕೆಲಸ ಮಾಡಿದರೆ ಮೆಚ್ಚುಗೆಯ ಮಾತುಗಳು ಕೇಳಿಬರು ತ್ತವೆ. "ಅವನು ಮಾಡಿದ ಕೆಲಸ ಸರಿಯಲ್ಲ, ನಾಲ್ಕು ಜನರ ಮುಂದೆ ಮುಜುಗರವಾಯಿತು," ಎಂದು ಒಬ್ಬರು ಗೊಣಗಿದರೆ, "ಅವನು ಹಳ್ಳಿಗೆ ದೊಡ್ಡ ಹೆಸರು ತಂದಿದ್ದಾನೆ," ಎಂದು ಇನ್ನೊಬ್ಬರು ಹೊಗಳುತ್ತಾರೆ. ಹೀಗೆ ಹರಟೆ ಕಟ್ಟೆ ಹಳ್ಳಿಯ ಸಾಮಾಜಿಕ ಜೀವನದಲ್ಲಿ ಒಂದು ಮಹತ್ವದ ಪಾತ್ರ ವಹಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ಮೊಬೈಲ್ ಫೋನ್‌ಗಳು ಮತ್ತು ಟಿವಿಗಳ ಪ್ರಭಾವದಿಂದ ಹರಟೆ ಕಟ್ಟೆಗಳ ಪ್ರಾಮುಖ್ಯತೆ ಕಡಿಮೆಯಾಗುತ್ತಿದೆ ಎಂಬ ಮಾತುಗಳಿದ್ದರೂ, ಗ್ರಾಮೀಣ ಬದುಕಿನಲ್ಲಿ ಇದರ ಸ್ಥಾನ ಇನ್ನೂ ಅಚಲವಾಗಿದೆ. ಏಕೆಂದರೆ, ಹರಟೆ ಕಟ್ಟೆ ಕೇವಲ ಇಟ್ಟಿಗೆ ಮತ್ತು ಸಿಮೆಂಟಿನಿಂದ ಕಟ್ಟಿದ ಕಟ್ಟೆಯಲ್ಲ, ಅದು ಹಳ್ಳಿಯ ಜನರ ಬಾಂಧವ್ಯ, ಪ್ರೀತಿ ಮತ್ತು ಸಹಬಾಳ್ವೆಯ ಪ್ರತೀಕ. ಇಲ್ಲಿ ನಡೆಯುವ ಪ್ರತಿ ಚರ್ಚೆಯೂ ಹಳ್ಳಿಯ ಜೀವನವನ್ನು ಇನ್ನಷ್ಟು ಆಸಕ್ತಿಕರಗೊಳಿಸುತ್ತದೆ!

– ನಂದಿ ಬಸವರಾಜ ನಿವೃತ್ತ ಶಿಕ್ಷಕರು ಕೂಡ್ಲಿಗಿ.

• Admissions
• Requirements
• Firm Branding
• Public Notice
• Change of Name

"Thousands of eyes, one newspaper. 'Hampi Times' delivers your message directly to Hampi Times engaged readers."

HAMPI TIMES Kannada Daily
Print & Digital News Paper
BOOK NOW!
Scan to Read

• Obituary
• Remembrance
• Birthday wish ads
• Events Display &
• Classified ads

# HAMPI TIMES, Bamboo Bazaar, Nr Valmiki Circle, Hosapete-583201, Vijayanagara Dist. 9482599089 / 9448633038

DC & SSLC TOPER TALK

scan to watch video



ಸರ್ಕಾರಿ ಶಾಲೆ, ನಮ್ಮ ಶಾಲೆ
ಗುಣಮಟ್ಟದ ಶಿಕ್ಷಣಕ್ಕೆ ಮೊದಲ ಹೆಜ್ಜೆ

(Government school, our school - the first step towards quality education.)

ಸರ್ಕಾರಿ ಶಾಲೆಗಳಲ್ಲಿ 2025-26ನೇ ಸಾಲಿನ ಪ್ರವೇಶ ಉಚಿತ
FREE Admission

ಬನ್ನಿ, ಬೆಂಬಲಿಸಿ, ಸರ್ಕಾರಿ ಶಾಲೆಗಳನ್ನು ಬಲಪಡಿಸಿ (Come, support, strengthen government schools.) - ಹಂಪಿ ಟೈಮ್ಸ್ ಬಳಗ, ವಿಜಯನಗರ

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ | ಸಂವತ್ಸರ: ವಿಶ್ವವಸು

**14-06-2025 – ಶನಿವಾರ**

| | |
|---|---|
| ತಿಥಿ | : ತೃತೀಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉತ್ತರಾಷಾಡ |
| ಯೋಗ | : ಬ್ರಹ್ಮ |
| ಕರಣ | : ವಿಷ್ಟಿ |
| ಸೂರ್ಯೋದಯ | : 05:42:08 |
| ಸೂರ್ಯಾಸ್ತ | : 19:12:30 |
| ರಾಹು ಕಾಲ | : 09:05–10:46 |
| ಯಮಘಂಡ ಕಾಲ | : 14:09–15:50 |
| ಗುಳಿಕ ಕಾಲ | : 05:42–07:23 |

## ತುಂಗಭದ್ರಾ ನೀರಿನ ಮಟ್ಟ



ಶುಕ್ರವಾರ : 13–06–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1602.96 ಅಡಿ |
| ಒಳ ಹರಿವು | 8269 ಕ್ಯುಸೆಕ್ |
| ಹೊರ ಹರಿವು | 92 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 25.589 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1582.13 ಅಡಿ |
| ಒಳ ಹರಿವು | 3533 ಕ್ಯುಸೆಕ್ |
| ಹೊರ ಹರಿವು | 10 ಕ್ಯುಸೆಕ್ |
| ಸಾಮರ್ಥ್ಯ | 5.590 ಟಿಎಂಸಿ |

ಕಲಿಯುವುದೇ
ವಿಜಯದ ದಾರಿ
ಜ್ಞಾನವೇ ಶ್ರೇಷ್ಠ ಆಯುಧ !

ಜೂನ್ 21 ರಂದು ಅಂತರಾಷ್ಟ್ರೀಯ ಯೋಗ ದಿನಾಚರಣೆ | ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ನಿರ್ದೇಶನ

# ಒಂದು ಭೂಮಿ ಒಂದು ಆರೋಗ್ಯಕ್ಕಾಗಿ ಯೋಗ

### ಅರ್ಥಪೂರ್ಣ ಆಚರಣೆಗೆ ಸಕಲ ಸಿದ್ಧತೆ ಕೈಗೊಳ್ಳಿ | ಎಲ್ಲಾ ಇಲಾಖೆ ಅಧಿಕಾರಿಗಳು ಭಾಗವಹಿಸುವುದು ಕಡ್ಡಾಯ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಕೇಂದ್ರದಲ್ಲಿ ಜೂನ್ 21 ರಂದು ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಆಯೋಜಿಸಲು ಬೇಕಾದ ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜೂ.21 ರಂದು ನಗರದ ಶೆಟ್ರ ಗುರುಶಾಂತಪ್ಪ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ ನಡೆಸಲು ನಿರ್ಧರಿಸಲಾಗಿದ್ದು, ಅರ್ಥಪೂರ್ಣವಾಗಿ ಆಚರಿಸುವ ನಿಟ್ಟಿನಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳ ಒಳಗೂಡಿ ಸಮಿತಿ ರಚಿಸಿ, ಜವಾಬ್ದಾರಿಗಳನ್ನು ವಹಿಸಿಕೊಂಡು ಸಮರ್ಪಕವಾಗಿ ನಿರ್ವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮಳೆಗಾಲ ಹಿನ್ನಲೆಯಲ್ಲಿ ಮುಂಜಾಗರೂಕರಾಗಿ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಅಡ್ಡಿಯಾಗದಂತೆ ಪರ್ಯಾಯ ವ್ಯವಸ್ಥೆಗೆ ಕಾರ್ಯಪ್ರವೃತ್ತರಾಗಿರಬೇಕು ಎಂದು ತಿಳಿಸಿದರು.

ಅಂದು ಬೆಳಿಗ್ಗೆ 07 ರಿಂದ ಯೋಗ ಕಾರ್ಯಕ್ರಮ ಜರುಗಲಿದ್ದು, ನಂತರ ಯೋಗ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಬಳಿಕ ಯೋಗಾಸನ ಮಾಡಲು ನಿರ್ದೇಶನ





ಮಾಡಲಾಗುವುದು. ವೇದಿಕೆ ಸಿದ್ಧತೆಗೆ ಪರಿಶೀಲನೆ ಮಾಡಿಕೊಳ್ಳಬೇಕು ಎಂದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು.

ಜಿಲ್ಲಾ ಮಟ್ಟದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಹೆಚ್ಚಿನ ಜನ ಆಗಮಿಸುವಂತೆ ಪ್ರಚಾರ ಕೈಗೊಳ್ಳಬೇಕು. ಪತಂಜಲಿ ಯೋಗ ಕೇಂದ್ರ, ಆರ್ಟ್ ಆಫ್ ಲಿವಿಂಗ್ ಸೇರಿದಂತೆ ಯೋಗ ಕೇಂದ್ರಗಳು ಅಗತ್ಯವಾಗಿ ಸಹಕಾರ ನೀಡಬೇಕು ಎಂದರು.

ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಹಾಸ್ಟೆಲ್‌ಗಳಲ್ಲಿರುವ ವಿದ್ಯಾರ್ಥಿಗಳು ಯೋಗಾಸನ ಕಾರ್ಯಕ್ರಮದಲ್ಲಿ ಭಾಗವಹಿಸುವ ನಿಟ್ಟಿನಲ್ಲಿ ಕ್ರಮವಹಿಸಲು ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಸಮಾಜಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಆಗಮಿಸುವವರಿಗೆ ಲಘು ಉಪಹಾರ ಮತ್ತು ನೀರಿನ ವ್ಯವಸ್ಥೆ, ಯೋಗಾಸನ ಮಾಡಲು ಗ್ರೀನ್ ಮ್ಯಾಟ್ ವ್ಯವಸ್ಥೆ ಮತ್ತು ವೇದಿಕೆ ಹಾಗೂ ಧ್ವನಿವರ್ಧಕ ವ್ಯವಸ್ಥೆ ಹಾಗೂ ಆವರಣದೊಳಗೆ ಸಂಪೂರ್ಣ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ನುರಿತ ಯೋಗ ಶಿಕ್ಷಕರನ್ನು ನಿಯೋಜಿಸಬೇಕು. ಆರೋಗ್ಯ ಇಲಾಖೆಯಿಂದ ಅಗತ್ಯ ಚಿಕಿತ್ಸಾ ವ್ಯವಸ್ಥೆ ಸೇರಿದಂತೆ ಇನ್ನಿತರ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳಲು ಪೊಲೀಸ್ ಬಂದೋಬಸ್ತ್ ಒದಗಿಸಬೇಕು. ಒಟ್ಟಾರೆ ಕಾರ್ಯಕ್ರಮ ಶಿಸ್ತುಬದ್ಧವಾಗಿ ಯಾವುದೇ ಲೋಪ ಆಗದಂತೆ ನೋಡಿಕೊಳ್ಳಬೇಕು ಎಂದರು.

ಯೋಗ ದಿನಾಚರಣೆ ಅಂಗವಾಗಿ ಯೋಗದ ಮಹತ್ವ ಸಾರುವ ಉದ್ದೇಶದಿಂದ ಬಳ್ಳಾರಿಯಲ್ಲಿ ಪೂರ್ವಭಾವಿ ಯೋಗ ಶಿಬಿರ ಕೈಗೊಳ್ಳಬೇಕು. ಅಂದು ನಡೆಯುವ ಕಾರ್ಯಕ್ರಮಕ್ಕೆ ಎಲ್ಲ ಇಲಾಖೆಗಳ ಅಧಿಕಾರಿಗಳು ಕಡ್ಡಾಯವಾಗಿ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಬೇಕೆಂದು ಹೇಳಿದರು.

ಯೋಗ ತರಬೇತಿಯು ಕೇವಲ ಒಂದು ದಿನಕ್ಕೆ ಸೀಮಿತವಾಗಬಾರದು. ಯೋಗವನ್ನು ಮಾಡುವುದರಿಂದ ವ್ಯಕ್ತಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಸದೃಡನಾಗುತ್ತಾನೆ. ಪ್ರತಿದಿನ ಯೋಗ ಮಾಡಲು ರೂಢಿಸಿಕೊಳ್ಳಬೇಕು ಎಂದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ಎಂ.ವಿರುಪಾಕ್ಷ ಅವರು ಮಾತನಾಡಿ, ಈ ವರ್ಷದ ಒಂದು ಭೂಮಿ ಒಂದು ಆರೋಗ್ಯಕ್ಕಾಗಿ ಯೋಗ ಎಂಬ ಘೋಷವಾಕ್ಯದೊಂದಿಗೆ ಕಾರ್ಯಕ್ರಮ ಆಚರಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕರಾದ ಸಕೀನಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಜಿಲ್ಲೆಯ ವಿವಿಧ ಯೋಗ ಕೇಂದ್ರದ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಡೆಂಗ್ಯು ನಿಯಂತ್ರಣ ಕುರಿತು ಶಿಕ್ಷಕರಿಗೆ ತರಬೇತಿ | ಡಿಹೆಚ್ಓ ಡಾ.ಯಲ್ಲಾ ರಮೇಶ್ ಬಾಬು ಸಲಹೆ

# ಶಾಲಾ ಆವರಣ ಸ್ವಚ್ಛವಾಗಿಟ್ಟುಕೊಳ್ಳಿ

**ಹಂಪಿ ಟೈಮ್ಸ್ ಬಳ್ಳಾರಿ**

ರೋಗ ಲಕ್ಷಣಗಳಾಧರಿಸಿ ಚಿಕಿತ್ಸೆ ನೀಡಲ್ಪಡುವ ಡೆಂಗ್ಯು ರೋಗ ನಿಯಂತ್ರಣಕ್ಕೆ ಶಿಕ್ಷಕರ ಪಾತ್ರವು ಮುಖ್ಯವಾಗಿದ್ದು, ತಮ್ಮ ಶಾಲೆ ಆವರಣಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.

ಶಾಲೆಗಳ ಆರಂಭವಾದ ಹಿನ್ನಲೆಯಲ್ಲಿ ರಾಜ್ಯ ಸರ್ಕಾರದ ಮಾರ್ಗಸೂಚಿಯಂತೆ ಜಿಲ್ಲೆಯಾದ್ಯಂತ ಶಾಲಾ ಶಿಕ್ಷಕರುಗಳಿಗೆ ಡೆಂಗ್ಯು ನಿಯಂತ್ರಣ ಕುರಿತು ತರಬೇತಿ ನೀಡಲಾಗುತ್ತಿದ್ದು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಆಶ್ರಯದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮೂಲಕ ಕರೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 41 ಶಾಲೆಗಳ ವಿಜ್ಞಾನ ನೋಡಲ್ ಶಿಕ್ಷಕರಿಗೆ ಶುಕ್ರವಾರ ಹಮ್ಮಿಕೊಂಡಿದ್ದ ತರಬೇತಿಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಈ ಬಾರಿ ಮುಂಚಿತವಾಗಿಯೇ ಮಳೆಗಾಲ ಆರಂಭಗೊಂಡಿದೆ. ಅದೇರೀತಿಯಾಗಿ ಶಾಲೆಗಳು ಸಹ ಪ್ರಾರಂಭವಾಗಿದ್ದು, ಈ ಹಿನ್ನಲೆಯಲ್ಲಿ ಶಾಲಾ ಆವರಣಗಳಲ್ಲಿ ಮಳೆ ನೀರು ನಿಲ್ಲದಂತೆ ನೋಡಿಕೊಳ್ಳಬೇಕು ಎಂದರು.

ಎಲ್ಲಾ ಶಾಲೆಗಳಲ್ಲಿಯ ನೀರು ಸಂಗ್ರಹಕ ಸಿಂಟೆಕ್ಸ್‌ಗಳನ್ನು ಶುಚಿಗೊಳಿಸಿ, ಸರಿಯಾಗಿ ಮುಚ್ಚಬೇಕು ಹಾಗೂ ಖಾಸಗಿ ವಸತಿ ಶಾಲೆಗಳಲ್ಲಿ ಬಸ್‌ಗಳ ಟೈರ್‌ಗಳನ್ನು ಸೂಕ್ತ ವಿಲೇವಾರಿ ಮಾಡಬೇಕು. ಶಾಲೆಗಳಲ್ಲಿ ಆರೋಗ್ಯ ಇಲಾಖೆಯಿಂದ ಸಿದ್ಧಪಡಿಸಿರುವ ವಿಡಿಯೋಗಳನ್ನು ಸ್ಮಾರ್ಟ್ ಕ್ಲಾಸ್ ಮೂಲಕ ಪ್ರದರ್ಶಿಸಿ ಹೆಚ್ಚಿನ ಜಾಗೃತಿಗೆ ಕೈ ಜೋಡಿಸಬೇಕು ಎಂದರು.

ನಿಂತನೀರಿನಲ್ಲಿಸೊಳ್ಳೆಉತ್ಪತ್ತಿಯಾಗುವುದರ ಮೂಲಕ ಸೊಳ್ಳೆಯ ಕಚ್ಚುವಿಕೆಯಿಂದ ಹರಡುವ ಚಿಕುನ್‌ಗುನ್ಯಾ, ಮಲೇರಿಯಾ, ಆನೇಕಾಲು ರೋಗ, ಮೆದುಳು ಜ್ವರ ಮುಂತಾದವುಗಳು ಕಂಡುಬರುವ ಸಾಧ್ಯತೆ ಇರುತ್ತದೆ. ಈ ಹಿನ್ನಲೆಯಲ್ಲಿ ಶಾಲೆಗಳಿಗೆ ಆಗಮಿಸುವ ವೈದ್ಯಕೀಯ ತಂಡ ನೀಡುವ ಸಲಹೆಗಳನ್ನು ತಪ್ಪದೇ ಅನುಸರಿಸಿ ರೋಗ ತಡೆಗೆ ಸಹಕರಿಸಬೇಕು ಎಂದು ತಿಳಿಸಿದರು.

ನಿರಂತರವಾಗಿ ನೀರು ನಿಲ್ಲುವ ಸ್ಥಳಗಳಲ್ಲಿ ಸುಟ್ಟ ಆಯಿಲ್ ಹಾಕಲು ಮತ್ತು ಮಕ್ಕಳು ಉದ್ದ ತೋಳಿನ ಶರ್ಟ್ ಹಾಗೂ ಪಾದದವರೆಗೆ ರಕ್ಷಿಸುವ ಪ್ಯಾಂಟ್ ಧರಿಸುವಂತೆ ಸೂಚಿಸಬೇಕು ಎಂದರು.

**ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ರಕ್ತ ಪರೀಕ್ಷೆಗೆ ವ್ಯವಸ್ಥೆ:**

ಜಿಲ್ಲೆಯ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ರಕ್ತ ಪರೀಕ್ಷೆ ಮೂಲಕ ಮಲೇರಿಯಾ, ಡೆಂಗ್ಯು ರೋಗ ಪತ್ತೆ ಹಚ್ಚುವ ಹಾಗೂ ಪ್ಲೇಟ್‌ಲೇಟ್ಸ್, ಸಿಬಿಸಿ, ಹೆಚ್‌ಬಿ ಮುಂತಾದವುಗಳ ಪರೀಕ್ಷೆ ಹಾಗೂ ಬೆಳಗಿನ ಅವಧಿಯಲ್ಲಿ ಉಪಹಾರ ಪೂರ್ವ ರಕ್ತ ಪರೀಕ್ಷೆ ಮಾಡಿಸಲು ಸೂಕ್ತ ವ್ಯವಸ್ಥೆ ಕಲ್ಪಿಸಿದ್ದು, ಸಾರ್ವಜನಿಕರಿಗೆ ಇದರ ಸದುಪಯೋಗಕ್ಕಾಗಿ ವ್ಯಾಪಕ ಪ್ರಚಾರ ನೀಡುವಂತೆ ವಿನಂತಿಸಿದರು.

ಆಡಳಿತ ವೈದ್ಯಾಧಿಕಾರಿ ಡಾ.ಸುನೀಲ್, ಡಾ.ಬಾಲಾಜಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಮಹಮ್ಮದ್ ಖಾಸಿಂ, ಆರೋಗ್ಯ ನಿರೀಕ್ಷಣಾ ಧಿಕಾರಿ ವೆಂಕಪ್ಪ ಸೇರಿದಂತೆ ಶಾಲಾ ಗುರುಗಳು, ಪ್ರಾಥಮಿಕ ಆರೋಗ್ಯ ಸುರಕ್ಷಾಧಿ ಕಾರಿಗಳು, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ್ದ ಆರೋಪಿಗೆ ಶಿಕ್ಷೆ ಪ್ರಕಟ

**ಹಂಪಿ ಟೈಮ್ಸ್ ಕೊಪ್ಪಳ**

ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದ ಆರೋಪಿಗಳಿಗೆ ಶಿಕ್ಷೆ ವಿಧಿಸಿ ಗಂಗಾವತಿಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು ತೀರ್ಪು ಪ್ರಕಟಿಸಿದ್ದಾರೆ.

ಗಂಗಾವತಿಯ ಮಹಾವೀರ ಸರ್ಕಲ್ ಹತ್ತಿರ 2021ರ ಮಾರ್ಚ್ 27 ರಂದು ಅರ್ಬಾಜ್‌ಖಾನ್, ಅರ್ಬಾಜ್ ಖಾಜಿ ಹಾಗೂ ಹುಸೇನ್ ರಜಾಕ್ ಶೇಖ್ ಎಂಬ ಆರೋಪಿಗಳು ಕರ್ತವ್ಯದಲ್ಲಿದ್ದ ಪೊಲೀಸ್ ಸಿಬ್ಬಂದಿಗೆ ಅವಾಚ್ಯವಾಗಿ ನಿಂದಿಸಿ, ದೈಹಿಕ ಹಲ್ಲೆ ನಡೆಸಿದ್ದರು. ಗಂಗಾವತಿಯ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನಗರಠಾಣೆಯ ಪಿಐ ವೆಂಕಟಸ್ವಾಮಿ.ಟಿ ತನಿಖೆ ಕೈಗೊಂಡಿದ್ದರು. ಪ್ರಕರಣದ ವಿಚಾರಣೆ ನಡೆಸಿದ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಸದಾನಂದ ನಾಗಪ್ಪ ನಾಯಕ ಅವರು ಸಾಕ್ಷಿ ಮತ್ತು ದಾಖಲೆಗಳನ್ನು ಪರಿಶೀಲಿಸಿ ಆರೋಪಿಗಳು ತಪ್ಪಿತಸ್ಥರೆಂದು ತೀರ್ಪು ನೀಡಿದ್ದು, 6 ತಿಂಗಳ ಕಾರಾಗೃಹ ವಾಸದ ಶಿಕ್ಷೆ ಹಾಗೂ ರೂ.1000 ಗಳ ದಂಡ ಶಿಕ್ಷೆ ವಿಧಿಸಿದ್ದಾರೆ. ಪ್ರಕರಣದಲ್ಲಿ ಸರ್ಕಾರಿ ಅಭಿಯೋಜಕರಾದ ನಾಗಲಕ್ಷ್ಮೀ ಎಸ್. ಅವರು ವಾದ ಮಂಡಿಸಿದ್ದರು.

## ಮೈಕ್ರೋ ನ್ಯೂಸ್

### ಜೂ.16 ರಂದು ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–2 ರ ವ್ಯಾಪ್ತಿಯಲ್ಲಿ ಹೊಸ ಟಿ.ಸಿ ಅಳವಡಿಸುವ ಕಾರ್ಯ ಕೈಗೊಳ್ಳುತ್ತಿರುವುರಿಂದ ಜೂ.16 ರಂದು ಬೆಳಿಗ್ಗೆ 09 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ಎಫ್–64 ರ ವ್ಯಾಪ್ತಿಯ ಆಗಡಿ ಮಾರೆಪ್ಪ ಕಾಂಪೌಂಡ್ 3ನೇ ಅಡ್ಡ ರಸ್ತೆ, ಶ್ರೀರಾಂಪುರ ಕಾಲೋನಿ, ಮಾರ್ಕಂಡಯ್ಯ ಕಾಲೋನಿ, ಇಂದ್ರಾ ನಗರ, ರೂಪನಗುಡಿ ರಸ್ತೆ, ವಿಶ್ವನಾಥ್‌ಪುರಂ ಕಾಲೋನಿ ಹಾಗೂ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕನಿಷ್ಠ ಬೆಂಬಲ ಬೆಲೆದಡಿ ಜೋಳ ಮಾರಾಟಕ್ಕೆ ಜೂ.30 ಕೊನೆಯ ದಿನ

**ಮೊದಲ ಪುಟದಿಂದ**

ಈ ನಿಟ್ಟಿನಲ್ಲಿ ಶೀಘ್ರವಾಗಿ ನೋಂದಾಯಿತ ರೈತರು ಜೋಳವನ್ನು ಖರೀದಿ ಕೇಂದ್ರಗಳಲ್ಲಿ ಮಾರಾಟ ಮಾಡಿ ಸರ್ಕಾರದ ಈ ಯೋಜನೆಯ ಪ್ರಯೋಜನ ಪಡೆಯಬಹುದಾಗಿದೆ. ನಂತರ ಖರೀದಿ ಅವಧಿಗೆ ಅವಕಾಶವಿರುವುದಿಲ್ಲ.

ಬೆಂಬಲ ಬೆಲೆ ಯೋಜನೆ ಬಗ್ಗೆ ರೈತರಿಗೆ ಯಾವುದೇ ಸಮಸ್ಯೆಗಳಿದ್ದರೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ನಿಯಮಿತ ಬಳ್ಳಾರಿಯ ಶಾಖಾ ವ್ಯವಸ್ಥಾಪಕರು ಮತ್ತು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಜಿಲ್ಲಾ ವ್ಯವಸ್ಥಾಪಕರು ಹಾಗೂ ಆಯಾ ತಾಲ್ಲೂಕಿನ ತಹಶೀಲ್ದಾರ್, ಕೃಷಿ ಅಧಿಕಾರಿ, ಎ.ಪಿ.ಎಂ.ಸಿ ಕಾರ್ಯದರ್ಶಿ, ರೈತ ಸಂಪರ್ಕ ಕೇಂದ್ರಗಳನ್ನು ಸಂಪರ್ಕಿಸಬೇಕು ಎಂದು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯ ಸದಸ್ಯ ಕಾರ್ಯದರ್ಶಿಯೂ ಆದ ಆಹಾರ ಇಲಾಖೆಯ ಉಪನಿರ್ದೇಶಕರಾದ ಸಕೀನ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಕ್ಕಳಿಗೆ ಶಿಕ್ಷಣ ಕೊಡಿಸಿ ಜವಾಬ್ದಾರಿ ಮರೆಯಿರಿ

### ಸಹಾಯಕ ಸರ್ಕಾರಿ ಅಭಿಯೋಜಕಿ ವೈ. ಶಿಲ್ಪ ಹೇಳಿಕೆ | ಶಾಲಾ ಮಕ್ಕಳಿಗೆ ಕಾನೂನು ಅರಿವು ನೆರವು




**ಹಂಪಿ ಟೈಮ್ಸ್ ಕೂಡ್ಲಿಗಿ**

ಬಾಲ ಕಾರ್ಮಿಕ ಪದ್ಧತಿ ನಿವಾರಣೆಗೆ ಪ್ರತಿಯೊಬ್ಬರು ಕ್ರೀಯಾಶೀಲತೆಯಿಂದ ಕೆಲಸ ಮಾಡಬೇಕು ಎಂದು ಸಹಾಯಕ ಸರ್ಕಾರಿ ಅಭಿಯೋಜಕಿ ವೈ. ಶಿಲ್ಪ ಹೇಳಿದರು.

ತಾಲ್ಲೂಕು ಕಾನೂನು ಸೇವೆಗಳ ಸಮಿತಿ, ತಾಲ್ಲೂಕು ಆಡಳಿತ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಅಂಗವಾಗಿ ಪಟ್ಟಣದ ಜ್ಞಾನ ಭಾರತಿ ವಿದ್ಯಾಮಂದಿರದಲ್ಲಿ ಹಮ್ಮಿಕೊಂಡಿದ್ದ ಶಾಲಾ ಮಕ್ಕಳಿಗೆ ಕಾನೂನು ಅರಿವು ನೆರವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಡತನದಲ್ಲಿರುವ ಮಕ್ಕಳು ಹೆಚ್ಚಾಗಿ ಬಾಲಕಾರ್ಮಿಕ ಪದ್ಧತಿಗೆ ತುತ್ತಾಗುತ್ತಿದ್ದು, ಮಕ್ಕಳನ್ನು ಬಾಲಕಾರ್ಮಿಕ ಪದ್ಧತಿಗೆ ಒಳಪಡಿಸದೆ ಶಾಲೆಗೆ ಕಳುಹಿಸಿ ಉತ್ತಮ ಶಿಕ್ಷಣ ನೀಡುವಂತೆ ಪೋಷಕರಿಗೆ ಅರಿವು ಮೂಡಿಸಬೇಕು. ಈ ಭಾಗದಲ್ಲಿ ಬಹಳಷ್ಟು ಜನರು ಉದ್ಯೋಗ ಅರಸಿ ವಲಸೆ ಹೋಗುವುದರಿಂದ ಅವರ ಹಿಂದೆಯೇ ಮಕ್ಕಳು ಹೋಗುತ್ತಾರೆ. ಇದರಿಂದ ಅವರು ಶಿಕ್ಷಣದಿಂದ ವಂಚಿತರಾಗುತ್ತಾರೆ. ಅದ್ದರಿಂದ ಯಾವ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು ಎಂದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಸೂರಪ್ಪ ಡಂಬೂರ ಮತ್ತೂರ ಮಾತನಾಡಿ, ಕಾರ್ಮಿಕ ಇಲಾಖೆಯ ನಿತರಂತರ ಪ್ರಯತ್ನದಿಂದ ಬಾಲಕಾರ್ಮಿಕ ಪದ್ಧತಿ ಕಡಿಮೆಯಾಗಿದೆ. ಎಲ್ಲಿಯೇ ಅಗಲಿ ಬಾಲ ಕಾರ್ಮಿಕರು ಕಂಡು ಬಂದರೆ ಮಾಹಿತಿ ನೀಡಿ. ಅಂತಹ ಬಾಲ ಕಾರ್ಮಿಕರನ್ನು ರಕ್ಷಿಸಿ, ಅವರನ್ನು ನೇಮಿಸಿಕೊಂಡವರಿಗೂ, ಅವರ ಪೋಷಕರಿಗೂ ಶಿಕ್ಷೆ ಕೊಡಿಸಲಾಗುವುದು ಎಂದು ಹೇಳಿದರು.

ಜಿಲ್ಲಾ ಬಾಲ ಕಾರ್ಮಿಕ ಯೋಜನೆಯ ಕ್ಷೇತ್ರಾಧಿಕಾರಿ ಪಿ.ಎಂ. ಈಶ್ವರಯ್ಯ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನದ ಕುರಿತು ಮಾತನಾಡಿದರು. ತಹಶೀಲ್ದಾರ್ ವಿ.ಕೆ. ನೇತ್ರಾವತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪ್ಯಾನಲ್ ವಕೀಲ ಡಿ. ಕರಿಬಸವರಾಜ, ಕೂಡ್ಲಿಗಿ ವೃತ್ತದ ಪ್ರಭಾರ ಕಾರ್ಮಿಕ ಅಧಿಕಾರಿ ಶಿವಶಂಕರ ಬಿ. ತಳವಾರ,ತಾಲ್ಲೂಕು ಪಂಚಾಯ್ತಿ ಉದ್ಯೋಗ ಖಾತ್ರಿ ಯೋಜನೆಯ ಸಹಾಯಕ ನಿರ್ದೇಶಕ ಪ್ರಕಾಶ, ಶಿಕ್ಷಣ ಸಂಯೋಜಕ ನಾಗರಾಜ, ಶಿಕ್ಷಕ ಗುಪ್ಪಾಲ ಕೊಟ್ರೇಶ್, ಕಾರ್ಮಿಕ ಇಲಾಖೆಯ ಚಂದ್ರಕಾಂತ್ ಪಾಲ್ಗೊಂಡಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ

Searching for the perfect platform to promote your brand?
Want to reach more people?
Choose HAMPI TIMES

Scan to read epaper



HAMPI TIMES
Kannada Daily News paper
Print & Digital Edition
Contact : 94486 33038
E-mail: hampitimes@gmail.com
www.hampitimes.com